


ಹೇಮಕೂಟದಿಂದ ಕಾಣುವ ನೋಟ

ನಾಗರಿಕ

ಎಂ. ಆರ್. ಶ್ರೀನಿವಾಸಮೂರ್ತಿ

ಬೆಂಗಳೂರು ಸಿಟಿ
ಬೆಂಗಳೂರು ಪ್ರೆಸ್, ಮೈಸೂರು ರೋಡ್
೧೯೩೪

ಮೊದಲನೆಯ ಮುದ್ರಣದ ಮುನ್ನುಡಿ

ಕೆಲವು ವರ್ಷಗಳ ಹಿಂದೆ ಪಂಪಾ ಯಾತ್ರೆಗಾಗಿ ಸ್ನೇಹಿತರು ಹೋಗಿದ್ದೆವು. ಪಂಪಾ ಯಾತ್ರೆ ಆಯಿತು. ಆದರೆ ಈ ಪುಸ್ತಕವನ್ನು ಕೂಡಲೇ ಮುದ್ರಣಮಾಡಲು ಅನುಕೂಲವಾಗಲಿಲ್ಲ. ಈಗ ಇದನ್ನು "ಪ್ರಬುದ್ಧ ಕರ್ಣಾಟಕ"ದಲ್ಲಿ ಪ್ರಕಟಿಸಿದ್ದಕ್ಕಾಗಿ ಅದರ ಸಂಪಾದಕರಿಗೂ ಕರ್ಣಾಟಕ ಸಂಘದ ಅಧಿಕಾರಿಗಳಿಗೂ ಬಹಳ ಕೃತಜ್ಞನಾಗಿದ್ದೇನೆ.

ಎಂ. ಆರ್. ಶ್ರೀ.

ಎರಡನೆಯ ಮುದ್ರಣ

ಮೊದಲನೆಯ ಮುದ್ರಣದ ಪ್ರತಿಗಳು ಮುಗಿದುಹೋದುದರಿಂದ ಈ ಎರಡನೆಯ ಮುದ್ರಣದ ಆವಶ್ಯಕತೆಯುಂಟಾಯಿತು. ಈ ಎರಡನೆಯ ಮುದ್ರಣದಲ್ಲಿ ಅಲ್ಲಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿದ್ದೇನೆ. ಈ ಗ್ರಂಥವನ್ನು ಎ. ಟಿ. ಸಿ. ಪರೀಕ್ಷೆಗೆ ವಿದ್ಯಾಭ್ಯಾಸದ ಇಲಾಖೆಯವರೂ, ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಮೈಸೂರು ವಿಶ್ವವಿದ್ಯಾನಿಲಯದವರೂ ಪಠ್ಯ ಪುಸ್ತಕವಾಗಿ ಇಟ್ಟಿರುವುದರಿಂದ ಇಲಾಖೆಯವರಿಗೂ ವಿಶ್ವವಿದ್ಯಾನಿಲಯದವರಿಗೂ ನಾನು ಬಹಳ ಕೃತಜ್ಞನಾಗಿದ್ದೇನೆ. ಇದರಲ್ಲಿರುವ ಚಿತ್ರಗಳ ಪಡಿಯಚ್ಚುಗಳನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರು ದಯವಿಟ್ಟು ಕೊಟ್ಟಿದ್ದಾರೆ. ಆ ಸಂಘದ ಅಧಿಕಾರಿಗಳಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ.

೨೧–೬–೧೯೩೪ ಎಂ. ಆರ್. ಶ್ರೀ.

ಪಾ ತ್ರ ಗ ಳು

ನಾಗರಿಕ

ಪೂಜಾರಿ

ದೇವರು

ಯಮ

ಋಷಿ

ವಿದ್ಯಾರಣ್ಯರು

ಭಕ್ತರು

ಜನಗಳು

ನಾಗರಿಕ

ಶ್ರೀ ರಮಣೀ ಮನೋರಮಣ ವಾಗ್ರಮಣೀ ರಮಣಾದ್ರಿರಾಜವು ।
ತ್ರೀ ರಮಣೀ ಮನೋರಮಣ ರೂಪದೆ ಸತ್ವರಜಸ್ತಮೋಗುಣಾ ॥
ಧಾರತೆಯಿಂ ಜಗತ್ಸ್ಥಿತಿ ಸಮುದ್ಭವ ಸಂಹೃತಿ ಹೇತುವಾದ ನೀ ।
ರೇರುಹನಾಭ ನೀರಜಸಮುದ್ಭವ ಶಂಕರರೀಗಭೀಷ್ಟಮಂ ॥

[ನಾಗಾಯಿ ಶಾಸನ B, 1058]

ದೃಶ್ಯ ೧

[ಪಂಪಾಪತಿಯ ದೇವಸ್ಥಾನದ ಬಳಿ. ನಾಗರಿಕನು ಪ್ರವೇಶಿಸುವನು.]

ನಾಗರಿಕ— ಎಮ್ಮೊಂದಿಗರ ಶೋಕವಾರಿಯಲಿ ಸಾಗರಗ
ಳೇಳಾಗಿ, ಗತಿಸಿರುವ ರಾಜ್ಯಗಳ ರಾಶಿಯಲಿ
ಪರ್ವತಗಳೇಳಾಗಿ ತುಂಬಿಹವು, ನಿಂದಿಹವು;
ಅಲ್ಲದೊಡೆ ವಿಧಾತನ ಸೃಷ್ಟಿಯಲಿ ತಕ್ಕ ಜೀ
ವನಮುಂಟೆ? ಘನತೆಯೇಂ ತಾಸುಂಟೆ?

[ದೇವಸ್ಥಾನದಲ್ಲಿ ಗಂಟೆಗಳನ್ನು ಬಾರಿಸುವ ಧ್ವನಿ ಕೇಳಿಬರುತ್ತದೆ.]

ಮಂಗಳಾ
ರತಿ ಪೊತ್ತು! ಅಕಟಕಟ! ಆ ದೇವನೆಲ್ಲಿಹನೊ?
ಇದೊರ್ಡೀ ದುರವಸ್ಥೆಯಿಲ್ಲಹುದೆ? ಕಲ್ಲುಗಳ
ಲೋಹಗಳ ನಂಬಿದರು ದೇಗುಲವ ಕಟ್ಟಿದರು
ಬಂದು ಪೊರೆಯುವನೆಂದು ಪೂಜೆಯಂ ಮಾಡಿದರು.
ದೇವನೇಂ ಬದುಕಿಹನೆ? ನೋಡುವೆನು—ನೋಡುವೆನು.

[ಹೊರಟು ಹೋಗುವನು.]

ದೃಶ್ಯ ೨

[ಪಂಪಾಪತಿಯ ದೇವಸ್ಥಾನದೊಳಗೆ ಮಂಗಳಾರತಿ ಆಗುವುದು. ಅನಂತರ ಪೂಜಾರಿಯು ತೀರ್ಥಪ್ರಸಾದಗಳನ್ನು ಕೊಡಲು ಬರುವನು. ಭಕ್ತಾದಿಗಳು ಆತುರದಿಂದ ಒಳಗೆ ನೋಡಲು ಮುಂದುವರಿಯುವರು. ಪೂಜಾರಿ ತಡೆಯುವನು.]

ಪೂಜಾರಿ— ಹತ್ತಿರಕೆ ಬರಬಹುದೆ? ಕೃತಯುಗದ ಮೂರ್ತಿಯಿದು.
ದೂರವಿರಿ, ದೂರವಿರಿ.

ಭಕ್ತ— ಕೃತಯುಗದಿ ನೆಲಸಿಹುದೆ?

ಪೂಜಾರಿ— ಅಹುದಹುದು. ಇದುವೆ ಪುಣ್ಯದ ಬೀಡು. ಪರಮೇಶ
ಹೇಮಕೂಟದಲಿದ್ದು ತಪವನಾಚರಿಸಿದನು.

ಭಕ್ತ— ಪರಮಾತ್ಮ ತಪವ ಮಾಡಿದುದುಂಟೆ?

ಪೂಜಾರಿ— ಇಲ್ಲಿಯೇ
ಮಾಡಿದನು.

ಭಕ್ತ— ಸರ್ವಶಕ್ತನಹ ಭಗವಂತ ತಾ
ನಿನ್ನೇನ ಕೋರಿದನೊ ತಪದಲ್ಲಿ?

ಪೂಜಾರಿ— ಕೋರಿದನು
ಲೋಕಕಲ್ಯಾಣವನು.

ಭಕ್ತ— ತಪವ ಬಿಟ್ಟೇಳಲಿ
ಲ್ಲವೆ ದೇವ?

ಪೂಜಾರಿ— ಏಳದೊಡೆ ಲೋಕಗಳ ಗತಿಯೇನು?
ರಾಕ್ಷಸರ ಬಾಧೆ ಹೆಚ್ಚುತಿರೆ ಬೃಂದಾರಕರು
ಕಾಮನಂ ಕರೆದಾಗ ಬೆಸಸಿದರು: "ಪರಮೇಶ
ತಪದಲ್ಲಿ ಕುಳ್ಳಿಹನು, ದೇವಿಯರು ಬಳಿಯಲ್ಲಿ
ನಿಂದಿಹರು. ನೀನೀಗ ಹೇಮಕೂಟಕೆ ಪೋಗಿ
ಕುಸುಮಶರವನು ಪೂಡಿ ದೇವನನ್ನೆಚ್ಚರಿಸು."
ಕಾಮನಂತೆಯೆ ಬಂದು ದೇವನನ್ನೆಚ್ಚರಿಸೆ

ಕೋಪದಿಂದುರಿಗಣ್ಣ ತೆರೆದುರುಪಿ ಕೈಲಾಸ
ವೈದಿದನು ಮಾದೇವ.

ಭಕ್ತ— ಪರಮಾತ್ಮನಂ ಕೆಣಕಿ
ಬದುಕುವನೆ?

ಭಕ್ತ— ದೇವತೆಗಳೆಂದೊಡೇಕದನು ಕೈ
ಕೊಂಡನೋ!

ಭಕ್ತ— ಉಪಕಾರಮಾಡಲೆಂದಾತ ಬರೆ
ಸಾವಿಂತು ಬರಬಹುದೆ?

ಪೂಜಾರಿ— ತನ್ನ ಹರಣವ ಕೊಟ್ಟು
ಪರರಿಗುಪಕೃತಿಯೆಸಗುವುದೆ ಪಿರಿದು. ದೇವಿಯರು
ಮತ್ತೆ ತಪವಾಚರಿಸಿ ಪರಮೇಶನನ್ನೊಲಿಸಿ
ಪಸೆನಿಂದುದಾಯ್ತು. ಷಣ್ಮುಖನುದಿಸೆ ತಾರಕಾ
ಸುರನ ಸಂಹೃತಿಯಾಯ್ತು. ಸಾಮಾನ್ಯವಲ್ಲವಿದು
ಈ ಕ್ಷೇತ್ರ.

[ನಾಗರಿಕನು ಪ್ರವೇಶಿಸುವನು; ಮುಂದೆ ಹೋಗುವನು.]

ನಾಗರಿಕ— ಅಲ್ಲಲ್ಲ. ಸಾಮಾನ್ಯವೇನಲ್ಲ
ತಿಳಿದಿಹುದು.

ಪೂಜಾರಿ— ಆರಯ್ಯ? ಈಯೆಡೆಗೆ ಬರಬಹುದೆ?
ದೂರವಿರು.

ನಾಗರಿಕ— ಏನಿದೆಯೊ ನೋಡುವೆನು.

ಪೂಜಾರಿ— ಏನಿದೆಯೊ
ನೋಡುವುದು! ದೇವನದೆ ಕಾಣಿಸನೆ? ದೇಗುಲವು
ಕಾಣಿಸದೆ?

ನಾಗರಿಕ— ದೇವನಿಹ! ದೇಗುಲವು!! ಎಲ್ಲಿಹನೊ
ಕಾಣಲೊಲ್ಲನು ದೇವ.

ಪೂಜಾರಿ— ನೋಡಲ್ಲಿ, ಕಾಣಿಸದೆ?
ಗುಡಿಯೆಂದು ಕಾಣಿಸದೆ? ಆನಿಲ್ಲಿ ಪೂಜಾರಿ
ನಿಂದಿಹೆನು, ಕಾಣಿಸದೆ?

ನಾಗರಿಕ— ಕೋಪವೇತಕೆ ಆರ್ಯ?
ಕಾಣುವಿರಿ ನೀವಿಲ್ಲಿ. ಆ ದೇವ ಕಾಣಿಸನು.
ಎತ್ತಡಗಿ ಪೋಗಿಹನೊ! ವೈಕುಂಠವೇನುಂಟು
ಕೈಲಾಸವೇನುಂಟು....

ಪೂಜಾರಿ— ಮೂರ್ಖ! ಕೈಯೊಡ್ಡು. ಹಿಡಿ
ತೀರ್ಥಪ್ರಸಾದಗಳ. ಗುಡಿಯೆಂದು ತಿಳಿಯುವುದು
ಸದ್ಬುದ್ಧಿ ಜನಿಸುವುದು ಭಕ್ತಿಯದು ಹುಟ್ಟುವುದು.

ನಾಗರಿಕ— ಬೇಡೆನಗೆ.

ಪೂಜಾರಿ— ಏನೆಂದೆ! ಅಕಟಕಟ! ಏನೆಂದೆ!
ಪೇಳಬಹುದೇ ಮಾತ?

ನಾಗರಿಕ— ಕೈಯೊಡ್ಡಿ ನಿಂದಿಹರು
ಆ ಜನಕೆ ಕೊಡಿ ನೀವು.

ಪೂಜಾರಿ— ಮತಿಹೀನ, ಮತಿಹೀನ!
ಹಂಪೆಯರಸನ ತೀರ್ಥ ಹಂಪೆಯೊಡೆಯನ ಹಸಾದ
ಇವುಗಳೆ ಜನ್ಮಗಳ ಪಾವನವ ಮಾಡುವುವು
ಪಾಪಗಳ ನಿರ್ಮೂಲ ಮಾಡುವುವು.

ನಾಗರಿಕ— ಇರುವನೇ
ಪರಮಾತ್ಮನಿದರಲ್ಲಿ? ಕಲ್ಲಿನಲಿ ಕೂತಿಹನೆ
ಹಾಳು ಹಂಪೆಯ ಒಡೆಯ?

ಪೂಜಾರಿ— ಮೂರ್ಖರಲ್ಲತಿಮೂರ್ಖ!
ದೇವನಂ ದೂಷಿಸುವೆ ಕಲ್ಲೆಂದು ಜರಿಯುತಿಹೆ
ನಾಲಗೆಯು ಸೇದೀತು ಕಣ್ಣಿಂಗಿ ಹೋದೀತು.

ಆವನಿವ ನಾಸ್ತಿಕನು? ದೂಡರೋ ಪಾಪಿಯನು
ವೇದಬಾಹಿರನತ್ತ.

[ಜನರು ನಾಗರಿಕನನ್ನು ಹಿಡಿದುಕೊಳ್ಳುವರು.]

ಭಕ್ತ— ಕಾಲಮಹಿಮೆಯ ನೋಡಿ.

ಭಕ್ತ— ಈಯೆಡೆಯಲೇಕಿವಗೆ ದುರ್ಬುದ್ಧಿ?

ಭಕ್ತ— ಬಂದವರು
ತಂತಮ್ಮ ಪಾಪಗಳ ಕಳೆದಿಟ್ಟು ಪುಣ್ಯವಂ
ಗಳಿಸಿಟ್ಟು ಪೋಗುವರು. ಈ ಪಾಪಿ ಪುಣ್ಯವಂ
ಬಿಟ್ಟಿಲ್ಲಿ ಪಾಪವಂ ಕೊಂಡೊಯ್ವ.

ಭಕ್ತ— ದುಷ್ಕಾಲ!
ದುಷ್ಕಾಲ!!

ನಾಗರಿಕ— ಪೋಗುವೆನು, ಪೋಗುವೆನು, ಒಳಗೇನೊ
ಗದ್ದಲವು ಕೇಳಿಸಿತು; ಏಸಿಹುದೊ ಗದ್ದಲವು
ನೋಡೋಣವೆನ್ನಿಸಿತು. ನೋಡಾಯ್ತು!

ಪೂಜಾರಿ— ಬಿಡಿರವನ.
ಎಲೆ ಪಾಪಿ, ಗದ್ದಲವೆ? ದೇವದೇವನ ಪೂಜೆ
ಗದ್ದಲವೆ? ಎಮ್ಮೊಡೆಯ ಹಂಪೆಯರಸನ ಪೂಜೆ
ಗದ್ದಲವೆ? ಈ ವಿರೂಪಾಕ್ಷದೇವನ ಪೂಜೆ
ಗದ್ದಲವೆ? ಎಲೆ ಪಾಪಿ! ಎಲೆ ಪಾಪಿ! ಕೇಳಿಲ್ಲ
ಎಮ್ಮೊಡೆಯನದ್ಭುತದ ಚರಿತೆಗಳ? ಕೇಳೀಗ
ಭಕ್ತಿಯುದು ಹುಟ್ಟುವುದು, ಮುಕ್ತಿ ತಾ ದೊರೆಯುವುದು.
ಮ್ಲೇಚ್ಛರಾಕ್ರಮಿಸಿ ವಿಜಯನಗರವನಂದು ಈ
ಗುಡಿಯ—ಪಂಪಾಪತಿಯ ದೇಗುಲವ—ಕೆಡೆಹೊಡೆದು
ಮುರಿಯಬೇಕೆಂದಿಲ್ಲಿಗೈತರಲು ಕಣ್ಣಿಂಗಿ
ಕುರುಡಾಗಿ ಪೋದರೈ; ವಿಲಯಕಾಲದ ವಾರ್ಧಿ
ತುಂಗಭದ್ರೆಯದಾಗಿ ಕೊಚ್ಚಿತ್ತು ಸಾಗರಕೆ.

ಮಹಿಮೆಯಂ ತಿಳಿಯದೆಯೆ ಬರಿದೇಕೆ ದೇವಸಂ
ದೂಷಿಸುವೆ? ನರಕದಲಿ ಚಿರಕಾಲ ಬಿದ್ದೇಕೆ
ಕಂಗೆಡುವೆ? ಪಂಪಾಪತಿಯನು ಸಾಮಾನ್ಯನೆಂ
ದರಿಯದಿರು. ಹೇಮಕೂಟಾದಿಗಳ ಋಷಿವರರು
ಮಹಿಮೆಯನು ತಿಳಿದಿಲ್ಲಿ ಪೂಜೆಯಂ ಮಾಡುವರು.
ಆಗಾಗ ರಾತ್ರಿಯಲಿ ಕೇಳಿಪುದು ಸುಸ್ವರದ
ಗೀತಗಳು ಮೆಲುನಡೆಯ ಸಪ್ಪಳವು. ಆರುಂಟು
ತಿಳಿದವರು ಪೂಜೆಯಾದ್ಯಂತಗಳ? ಹಿಡಿಯಿಾಗ
ತೀರ್ಥಪ್ರಸಾದಗಳ. ನಾಸ್ತಿಕಗೆ ಯಮರಾಜ
ಸೃಜಿಸಿಹನು ಘೋರವಹ ನರಕಗಳ. ನರಕಕ್ಕೆ
ಪೋಗದಿರು, ನಾಸ್ತಿಕನ ಗತಿಯನ್ನು ಬಯಸದಿರು.

ನಾಗರಿಕ— ಬಲು ಜಾಣರೈ ನೀವು. ಕಟ್ಟುಕಥೆಗಳ ಕಲಿತು
ಪೇಳುವಿರಿ. ಈ ಜನರು ಮರುಳಾಗಿ ದಕ್ಷಿಣೆಯ
ಕೊಡುತಿಹರು. ಕಥೆಗಳಿಗೆ ಕಾಲಿಲ್ಲ ಕೈಯಿಲ್ಲ.
ಪೇಳುವರು, ಕೇಳುವರು. ಜನವೇನು ಕುರಿಯಂತೆ
ನುಗ್ಗುವುದು.

ಪೂಜಾರಿ— ಕಟ್ಟುಕಥೆಗಳಂ ಹೇಳುತಿಹೆನೇ!
ಎಲೆ ಪಾಪಿ! ದೇವಿಯರು ಯಜ್ಞಕುಂಡದಲಾಗ
ಬಿದ್ದರೆಂಬುದ ಕೇಳಿ ಅತಿಕೋಪವನು ತಾಳಿ
ಪರಮೇಶ ಜಟೆಪಿಡಿದು ಧರೆಗಪ್ಪಳಿಸಲಿಲ್ಲ?
ಹುಟ್ಟಲಿಲ್ಲವೆ ನಮ್ಮ ವೀರಭದ್ರಸ್ವಾಮಿ?
ದಕ್ಷನನು ಯಜ್ಞವನು ಮುರಿದಳಿಸಿ ಅಮರರಿಗೆ
ಭೀತಿಯಂ ಬೀರಲಿಲ್ಲವೆ ನಮ್ಮ ವೀರಭ
ದ್ರಸ್ವಾಮಿ? ತಿಳಿಯದೆಯೆ ಆಡುತಿಹೆ, ಆಡುತಿಹೆ.

ನಾಗರಿಕ— ತಿಳಿಯದೆ "ಉದರನಿಮಿತ್ತಂ ಬಹುಕೃತವೇಷಂ"
ಇನ್ನೇನು? ಕೇಳುವೆನು.

ಪೂಜಾರಿ— ಅಯ್ಯಯ್ಯೋ! ವೇಷವಂ
ಧರಿಸಿಹೆನೆ! ದೇವದೇವ! ಉದರನಿಮಿತ್ತವೇ
ಈ ಪೂಜೆ! ಎಲೆ ಪಾಪಿ, ಎಲೆ ಪಾಪಿ! ದೇವನೇಂ
ಇಲ್ಲ? ನಮ್ಮ ಪಂಪಾಪತಿಯಿಲ್ಲ? ಪರಮೇಶ
ಹೇಮಕೂಟದಲಿದ್ದು ಉಗ್ರತಪವೆಸಗಿಲ್ಲ?
ಪಾರ್ವತೀದೇವಿಯುರು ಭುವನೇಶ್ವರಿಯುರಾಗಿ
ಅವತರಿಸಿ ಬರಲಿಲ್ಲ? ಪಂಪಾಧಿನಾಥನನು
ಮಹಾಮಹಿಮನನು ಭಗವಂತನನು ಲೋಕೈಕ
ನಾಥನನು ಇಲ್ಲವೆನ್ನುವೆ ಪಾಪಿ.

ನಾಗರಿಕ— ಮುಂದೇನು!

ಪೂಜಾರಿ— ನರಜನ್ಮ ಬರುವುದಕೆ ಪುಣ್ಯಮಾಡಿರಬೇಕು.
ತೀರ್ಥಯಾತ್ರಾಟನವು ಮೋಕ್ಷದವು. ಅದರೊಳಗೆ
ಹಂಪೆಯಿದು ಉತ್ತಮೋತ್ತಮವಯ್ಯ. ಈಯೆಡೆಗೆ
ನೀನೀಗ ಬಂದಿಹುದು ಪೂರ್ವಜನ್ಮದ ಪುಣ್ಯ
ಹಿರಿಯುರೆಸಗಿದ ಪುಣ್ಯ. ಬಂದುದಕೆ ಜನ್ಮವಂ
ಸಫಲಗೊಳಿಪುದೆ ಲೇಸು. ಹೀನಜನ್ಮದಿ ಮತ್ತೆ
ನಾಯಿನರಿಯಾಗಿ ನೀಂ ಪುಟ್ಟುವುದೆ? ಅಲೆಯುವುದೆ?
ಬೇಡಯ್ಯ. ಭಕ್ತಿಯುಸು ತಾಳು ಮುಕ್ತಿಯುನು ಪಡೆ.
ಹಿಡಿಯಿಾಗ. ಅವುಗಳಂ ತೀರ್ಥಪ್ರಸಾದಗಳೆ
ದೊರಕಿಪುವು. ಕೈಯೊಡ್ಡು. ಆಸ್ತಿಕನು ನೀನಾಗಿ
ದೇವನಂ ಬೇಡಿದೊಡೆ ನಿನ್ನೀಗ ಸಲಹುವನು.

ನಾಗರಿಕ— ಆವುದೂ ಬೇಡೆನಗೆ. ಕಣ್ಣಿಲ್ಲದಾ ದೇವ
ಮತಿಯಿಲ್ಲದೀ ಜನವು! ಹಣ್ಣುಗಳ ಕಾಯಿಗಳ
ತೋರಿದೊಡೆ ಸಾಕೆಂದು ಬಾಯ್ ಬಾಯಿ ಬಿಡುತಿರುವ
ದುರ್ಭಿಕ್ಷ ದೈವಗಳು, ಈ ದೈವಗಳ ನಂಬಿ
ಮೂಢ ಜನ! ಈ ಹುಚ್ಚು ಸುಲಭದಲಿ ಹೋಗುವುದೆ?
ನಿಮ್ಮನೀಕ್ಷಿಸೆ ಮರುಕವಾಗುವುದು ಬಲು ಮಾತ

ನಾಡಿಹಿರಿ, ಗಂಟಲದು ಒಣಗಿಹುದು, ತೀರ್ಥವನು
ನೀವೀಂಟಿ. ನರಕಕ್ಕೆ ಪೋಗುವೊಡೆ ಒರ್ವನೇ
ಪೋಗುವೆನು, ಎಡೆಯಿಲ್ಲ, ಆಗಲೇ ಕಿಕ್ಕಿರಿದು
ಪೋಗಿಹುದು ಪಾಪಿಗಳ ತಂಡದಲಿ. ಈ ಜನವು
ನಿಮ್ಮೊಂದು ದಯೆಯಿಂದ ಹಸಾದದ ಫಲದಿಂದ
ಕೈಲಾಸಮಂ ಪೊಕ್ಕು ಸುಖದಿಂದ ಕೂಡಿರಲಿ
ಪುಣ್ಯವಂತರ ಬೀಡು, ಎಡೆಯುಂಟು.

[ನಾಗರಿಕನು ಹೊರಟುಹೋಗುವನು.]

ಪೂಜಾರಿ— ಹಾ ದೇವ!
ದೇವ! ಗಿರಿಜಾನಾಥ! ನಾಸ್ತಿಕನ ವಾದಮಂ
ಕೇಳಿಸಿದೆ. ನಾನೇನು ಪಾಪವಂ ಮಾಡಿದೆನೋ!
ತೀರ್ಥಪ್ರಸಾದಗಳ ಮುಟ್ಟದೆಯೆ ಪೋದನವ
ದೂಷಿಸುತೆ ಪೋದನವ. ದೇವ! ದೇವ! ಸ್ವಾಮಿ.

[ಪೂಜಾರಿ ಮೂರ್ಛೆಹೋಗುವನು.]

ಭಕ್ತರು— "ಏನಾಯ್ತು? ಏನಾಯ್ತು? ಪಾಪಿ ನಾಸ್ತಿಕನೇಕೆ
ಬಂದನೋ!"

[ಉಪಚರಿಸಲು ಹೋಗುವರು.]

ದೃಶ್ಯ ೩

[ನಾರಸಿಂಹ ವಿಗ್ರಹ ಮತ್ತು ಸದಾಶಿವಲಿಂಗದ ಬಳಿ ನಾಗರಿಕನು ಬರುತ್ತಿರುವನು.]

ನಾಗರಿಕ— ಎಲ್ಲಿರುವೆ ನೀನಲ್ಲಿ? ಮರುಳಾಗಿಹರವರು.
ಲೋಹದಲಿ ನೀನೆಂದು ಕಲ್ಲಿನಲಿ ನೀನೆಂದು
ಕೈಮುಗಿದು ಮೊರೆಯಿಟ್ಟು ಕೀರ್ತನೆಯ ಪಾಡುವರು
ವರಗಳಂ ಬೇಡುವರು. ಮರುಕವಾಗುವುದೆನಗೆ.
ದೇಗುಲದಿ ನೀನುಂಟೆ? ಲಿಂಗದಲಿ ನೀನುಂಟೆ?
ಉಂಟಲ್ಲಿ ಕರ್ಪೂರದಾರತಿಯು ದೀವಟಿಯ
ಧೂಮಗಳು. ಶಬ್ದಮಯ ಧೂಮಮಯ; ನೀನಿಲ್ಲ.

[ಜನಗಳು ಪ್ರವೇಶಿಸುವರು.]

ಜನ— ಸಿಕ್ಕಿಹನು, ಸಿಕ್ಕಿಹನು.

ಜನ— ಈ ಪಾಪಿ ಕಾರಣನು.

ಜನ— ಪಾಪಿಯಂ ಪಿಡಿದೆಳೆದು ದೇಗುಲಕೆ ಕೊಂಡೊಯ್ವ.

ಜನ— ಅರ್ಚಕಗೆ ಪೊಡಮಟ್ಟು ತಪ್ಪೆಂದು ಬೇಡಲಿವ.

ನಾಗರಿಕ— ದೇವ! ನೀವೆಮ್ಮ ನಾಡೊಳಗುಂಟೆ? ಪೇಳುವುದು.
ಪೂಜಾರಿ ನಂಬಿಹನು; ತೋರಿದನು ಕೋಪವನು
ದುಃಖವನು. ನೋಡಲಮ್ಮದೆ ಬಂದೆ. ನೀತಿಯಂ
ಪೇಳಿದನು ಮಹಿಮೆಯನು ಸಾರಿದನು. ಆತನೊಳು
ತಪ್ಪುಂಟೆ? ಸಂಪ್ರದಾಯದ ಕಥೆಗೆ ಕಾಲುಂಟೆ?
ಕೊನೆಯಿಲ್ಲ ಮೊದಲಿಲ್ಲ, ಕಂಡವರು ತಾವಿಲ್ಲ.
ಕಣ್ಣುಗಳನಿಂಗಿಸಿದ ಪರಮಾತ್ಮ! ಉಕ್ಕೇರಿ
ವಿಲಯಕಾಲದ ವಾರ್ಧಿ ಕೊಚ್ಚಿತ್ತು ಸಾಗರಕೆ!!

ಜನ— ಇವನಾಟ ನೋಡಿದೆಯ? ನಮ್ಮ ದೇವರುಗಳಂ
ದೂಷಿಪನು. ಅಷ್ಟೊಂದು ದೇವರಿರೆ, ಒಬ್ಬರೂ

ಇಲ್ಲವೆಂದಾಡುವನು, ಕಲ್ಲೆಂದು ಹೇಳುವನು ;
ಅದರೊಳಗೆ ಪಂಪಾಪತಿ! ಪಂಪಾತಿಯೆನಲೇಂ
ಅರಿದುಂಟೆ? ಭಗವಂತನಾ ಮಹಿಮೆ ತಿಳಿದುಂಟೆ?

ನಾಗರಿಕ— ಮಹಿಮೆಯೇ!!

ಜನ— ಪುರಾಣದಲುಂಟು ನೀನರಿತಿಹೆಯ?

ನಾಗರಿಕ— ಪುರಾಣವೆ! ಮಹಿಮೆಯೇ! ಹಿಂದೆ ಹರಿಹರದಲ್ಲಿ
ಹರಿಹರೇಶ್ವರನನ್ನು ಕಿತ್ತೆಸೆದು ತುಂಗಭ
ದ್ರೆಯಲಿ ಮುಳುಗಿಸಲು ಪರಮಾತ್ಮನೇಗೈದನೋ!
ನೀರೊಳಗೆ ಮುಳುಮುಳುಗಿ ಸಿಹಿನೀರ ಕುಡಿಕುಡಿದು
ತೃಪ್ತಿವಡೆದಿರ್ದನೇಂ ನಿರ್ಮಾತ ಭಗವಂತ?
ಆಗಲಾ ಕರ್ಣರಂಧ್ರಗಳಲ್ಲಿ ಪುಗುತಿರ್ದ
ವೇದಗಳ ಘೋಷಣವೆ!! ಘೋಷಣೆಯ ನಾಬಲ್ಲೆ
ಏನೆಂದು ಮುತ್ತುವಿರಿ? ಏನನ್ನು ತಿಳಿದಿಹಿರಿ?
"ದೇವನಿಹ, ದೇಹನಿಹ" ಎಂದೆಲ್ಲ ನುಡಿಯುತ್ತ
ಕಲ್ಲುಗೊಂಬೆಯ ಪಿಡಿದು ತೋಳ ತೀಟೆಯ ಮರೆತ
ಹೇಡಿಗಳೆ! ಪಾಪಿಗಳೆ!

ಜನ— ಏನೇನೊ ಹೇಳುವನು,
ಅಹುದೇನು?

ಜನ— ಹರಿಹರಕೆ ಪೋಗಿಲ್ಲ, ನಾನಿದನು
ತಿಳಿದಿಲ್ಲ.

ಜನ— ಇರಬಹುದು

ಜನ— ಹಿಂದಾದುದೇನಿಹುದೊ!

ಜನ— ಆರುಂಟು ಬಲ್ಲವರು? ಏನೇನು ನಡೆದಿಹುದೊ!

ಜನ— ಆಗೇನು ಎಲ್ಲವೂ ನಡೆದಿಹುದು.

ಜನ— ಆ ದೇವ
ಸುಮ್ಮನೇಕಿದ್ದನೋ?



ಉಗ್ರನಾರಸಿಂಹ

ಜನ— ಏಕೆಂದು ಹೇಳುವುದು?

ಜನ— ಇರುಳಾಗಿ ನಿದ್ರೆಯೋ? ಸಂಸಾರ ಚಿಂತೆಯೋ?

ಜನ— ದೇವನೇನಿರಲಿಲ್ಲ?

ಜನ— ದೇವನಿದ್ದಿರಬೇಕು.

ಜನ— ದೇಗುಲವು! ದೇವನಿಲ್ಲದೆ ಉಂಟೆ? ಉಂಟುಂಟು.

ನಾಗರಿಕ— ದೇವನೆಲ್ಲಿರುವನೈ? ಎಲ್ಲಿರ್ಪವನಾ ದೇವ?
ಜೀವದಾಸೆಯು ಪಿಡಿದು ಪಂದೆಗಳ ಪರಿಯಲ್ಲಿ
ಪಾರಿದರೆ ದೇವನೇಂ ಕಾಣುವನೆ? ಬರಿದೇಕೆ
ಬಂದಿಹಿರಿ? ಹಣ್ಣುಕಾಯಿಗಳಿತ್ತು—ನಮ್ಮಪ್ಪ
ಬಾ—ಎಂದೊಡೇಂ ಬಂದು ಕುಣಿಯುವನೆ? ಶಕ್ತಿಯಂ
ಗಳಿಸಿರೈ ಮಾದೇವ ಮೆಚ್ಚುವನು, ಮುಕ್ತಿಯದು
ದೊರೆಯುವುದು; ಇಹದಲ್ಲಿ ಪರದಲ್ಲಿ ಸುಖವುಂಟು
ದೇವನೆಂಬವನಾತ ಬಲಶಾಲಿಯಾಗಿಹನು
ಬಲಶಾಲಿಯಂ ದೇವನೆಂದರ್ಚಿಪರು, ಎಲ್ಲ
ಬೇಡುವರು.

[ನಾರಸಿಂಹ ವಿಗ್ರಹದ ಹತ್ತಿರ ಹೋಗುವನು.]

ವಿಗ್ರಹಕೆ ಬಲವಂದು ಮೈಯಿಕ್ಕಿ
ವರಗಳಂ ಬೇಡಿದರು! ತನ್ನತಾ ಪೊರೆಯಲಾ
ರದ ದೇವನನ್ಯರನು ಪೊರೆದಪನೆ? ಎಲೆ ದೇವ!
ನರಸಿಂಹ! ನರಸಿಂಹ! ನಿನಗೇಕೆ ಈ ಗತಿಯು?
ದೇವರಲ್ಲಗ್ಗಳನು ಭಯರೂಪನಾಗಿರುವೆ
ಪಂಚಾಸ್ಯವಿರಲಿಲ್ಲಿ, ವಿಸ್ಫುಲಿಂಗೋಚ್ಚಳಿತ
ನೇತ್ರಂಗಳಿರಲಿಲ್ಲಿ, ನಖಕುಠಾರಂಗಳಿರ
ಲಿಲ್ಲಿ, ಭೀಕರಾಕೃತಿಯಿರಲಿಲ್ಲಿ ನಿನಗೇಕೆ
ಈ ಗತಿಯು? ಎಲೆ ದೇವ! "ಮೈದೋರು ಮೈದೋರು"
ಎಂದೊರಲುತಿರೆ ಪಸುಳೆ ಶಿಲಾಸ್ತಂಭವನುಗಿದು

ದೈತ್ಯನಂ ದುಷ್ಟಾತ್ಮನಂ ಸಿಡಿಲ್ದೆರಗುತ್ತೆ
ಕುಕ್ಷಿಯಂ ಬಗಿದುದುಂಟೇ? ಕರುಳ ಮಾಲೆಗಳ
ಧರಿಸಿ ನೀಂ ಮೆರೆದುದುಂಟೇ? ಅಕಟಕಟ! ನಿನ್ನ
ಮಡದಿರನ್ನೆಯಂ ಭೂದೇವಿಯಂ ಸೆರೆಗೆಯ್ದು
ಶತ್ರುಗಳ್ ಕೊಂಡೊಯ್ಯೆ ಹುಂಕಾರಮಾತ್ರದಿಂ
ಭಸ್ಮ ಮಾಡದೆಯೇಕೆ ಕುಳಿತಿರ್ದೆ? ನೀನೇಕೆ
ಕುಳಿತಿರ್ದೆ?

ಜನ— ಏನಾಯ್ತೊ? ಕಣ್ಣೀರು ಹರಿಸುವನು.

ನಾಗರಿಕ— ಎಲೆ ದೇವ! ಎಲೆ ದೇವ! ವೇದದಲಿ ಶಾಸ್ತ್ರದಲಿ
ವೇದಾಂತದಲಿ ಪುರಾಣೇತಿಹಾಸಂಗಳಲಿ
ನೀನುಂಟು, ಧರೆಯಲ್ಲಿ ನೀನಿಲ್ಲ. ಧರೆಯಲ್ಲಿ
ಶತ್ರುಗಳ ಪದಾಘಾತವೊಂದುಂಟು, ನಿನ್ನೀ
ತೊಡೆ ತೋಳುಗಳ ಮುರಿದುದೊಂದುಂಟು.


ಜನ— ಕಲ್ಲೊಡನೆ
ಮಾತಾಡಲೇನುಂಟು!

ಜನ— ಹಾಗೆಲ್ಲ ನುಡಿಯುವುದು
ತರವಲ್ಲ. ಆರೇನ ತಿಳಿದಿಹರು? ಮನವಾಗೆ
ಕಲ್ಲಿನಲೆ ತೋರುವನು ಪರಮಾತ್ಮ.

ಜನ— ಅಹುದಹುದು.

[ನಾಗರಿಕನು ಸದಾಶಿವಲಿಂಗದ ಬಳಿ ಹೋಗುವನು.]

ನಾಗರಿಕ— ತ್ರಿಪುರಾರಿ! ನಿನಗುಮಾಗತಿ ಯಾಯ್ತೆ! ಅಂದಿನಾ
ದಿನದಲ್ಲಿ ಸುಳಿವಿಲ್ಲ? ಛಾಯೆಯನು ಬಿಟ್ಟಿಲ್ಲಿ
ಕೈಲಾಸವೈದಿದೆಯ? ಸರ್ವಮಂಗಳೆಯೊಡನೆ
ಸುಖಸಂಕಥಾ ವಿನೋದದಲಿದ್ದು ಕಾಲವಂ
ಕಳೆದೆಯೇಂ? ಕಾಮನನು ಧಳ್ಳಿಸಿದೆಯೆನ್ನುವರು
ಜನರು. ಆ ಕುಸುಮಮಾರ್ಗಣನನ್ನು ದಹಿಸಲೇಂ



ಸದಾಶಿವ ಲಿಂಗ

ಪರಾಕ್ರಮ ಶಕ್ತಿಗಳು! ದೈತ್ಯದುರ್ಗಂಗಳನು
ರಿಪಿದ ಕಾಲಾಗ್ನಿರುದ್ರಂಗಹಿತವಾಹಿನಿಯ
ನುರುಪಲೇಂ ಬಲವಿಲ್ಲ? "ಚತುರ್ದಶಭುವನೈಕ
ನಾಥ" ಎಂಬರು ಜನರು, ಪೂಜಿಪರು ಕಲ್ಲುಗಳ.

ಜನ— ತೃಣರೇಣುಕಾಷ್ಠದಲಿ ಭಗವಂತನಿಹನೆಂದು
ಕೇಳಿಹೆವು. ಭಕ್ತಿಯಿಂ ಕರೆದಾಗ ಬರಬಹುದು;
ಕಲ್ಲಿನಲೆ ಬರಬಹುದು.

ನಾಗರಿಕ— ಕಲ್ಲಿನಲಿ ಪರಮಾತ್ಮ
ಬಹನೆಂದು ಅಭಿಷೇಕ ಮಾಡುತ್ತ ರಾಜ್ಯವಂ
ಕಳೆದಾಯ್ತು. ತಿಳಿಗೇಡಿಗಳು ಹುಚ್ಚು ಮಾನವರು.
ಕಲ್ಲೆಲ್ಲ ಮಣ್ಣೆಲ್ಲ ಮರವೆಲ್ಲ ಭಗವಂತ
ಎಂದೆಂದು ಕೈಮುಗಿದು ಕೈಕಟ್ಟಿ ಕುಳ್ಳಿಹಿರಿ
ದೇವನೇಂ ಬಂದಿಹನೆ? ಉದ್ಧಾರವಾಗಿಹಿರೆ?
ದೇವರುಗಳೆನಿತೊಂದು ಲೆಕ್ಕಪಕ್ಕಗಳುಂಟೆ?
ನಿಮ್ಮನೇಂ ಕಾಪಿಟ್ಟರೆ? ಮುಂದೆ ಕಾಪಿಡುವರೇ?
ದೇವನಾರೆಂಬುದೇನರಿತಿಹಿರೆ? ದೇಗುಲದಿ
ಪೂಜೆಗೀಜೆಗಳೇಕೆ? ಪುಣ್ಯಪಾಪದ ತಿರುಳು
ಬೇರುಂಟು. ಬಲಹೀನರಾಗಿರ್ದೊಡದು ಪಾಪ
ಬಲಯುಕ್ತರಾಗಿರ್ದೊಡದು ಪುಣ್ಯ. ನೀವೆಲ್ಲ
ಪುಣ್ಯಪಾಪವನರಿತು ಶಕ್ತಿಮಂದಿರವಾಗಿ
ಮಾಡಿರೈ ದೇಗುಲವ. ಮೂಗು ಹಿಡಿಯುವಿರೇಕೆ?
ಕಾಣಿರೇ ಕಲಿಯುಗವ ಯುದ್ಧಯುಗವನು ನೀವು?
ದೇವನವತಾರವನು ನೋಡಿಹಿರೆ? ಬರುವನೈ
ಪರಮಾತ್ಮ ಕವಚ ಸೀಸಕ ತೊಟ್ಟು, ಕುದುರೆಯಂ
ತಾನೇರಿ ಕತ್ತಿಯಂ ಬೀಸುತ್ತ ಬಾಣವಂ
ಸೂಸುತ್ತ ಭೂಭಾರವಿಳುಹಲೈತರುವನೈ.
ಬರಲೊಲ್ಲ ಭಿಕ್ಷುಕನ ಪರಿಯಲ್ಲಿ ಮನೆಮನೆಗೆ

ಭಿಕ್ಷೆಯನು ಬೇಡುತ್ತ. ಪೌರುಷಾತ್ಮನು ದೇವ
ತಾಮಸದ ಬೀಡಲ್ಲ ದೈನ್ಯತೆಯ ನೆಲೆಯಲ್ಲ.

ಜನ— ನಿಜವ ನುಡಿಯುತಲಿಹನು.

ಜನ— ಅಂತೆ ಮಾಳ್ಪುದು ಲೇಸು

ಜನ— ಈತನೇಂ ಬಲ್ಲ ಬಿಡು, ದೇವನೇ ಮಾಡಿಸುವ
ಕಾಲವೊದಗಿದೊಡೆ. "ಶಂಭೋ ಶಂಕರ ಶಂಕರ"
ಎಂದು ಹರಕೆಯಂ ಬೇಡುತೆಮ್ಮಯ ಪಾಡುಗಳ
ನೋಡಿದೊಡೆ ಸಾಕೆಮಗೆ.

ನಾಗರಿಕ— ದೇವನೇ ಮಾಡಿಸುವ!
ಮಾಡಿಸುವ ನಿಮಗೆಲ್ಲ! ಶಂಭುಗಿಂಭುಗಳೆಂದು
ಪಾಡುಗಳ ನೋಡುವೀ ಹೇಡಿಗಳ ಹಿಂಡನ್ನು
ಹಿಡಿದಿಂದು, ದೇವನೇ ಮಾಡಿಸುವ! ಹರಕೆಯಂ
ಬೇಡುವಿರಿ! ಏನೆಂದು ಬೇಡುವಿರಿ ಕುನ್ನಿಗಳೆ?
ಮಕ್ಕಳನು ಮರಿಗಳನು ಧನಕನಕವಸ್ತುವನು?
ಅನ್ಯರಿಗೆ ತೆರುವುದಕೆ ಏನನ್ನು ಬೇಡುವಿರಿ?
ಮಡದಿ ಮಕ್ಕಳ ಪಾಲಿಸುವ ಶಕ್ತಿಯಿನಿತಿಲ್ಲ
ಇದ್ದುದನು ಕೊಂಡೊಯ್ಯೆ ರೋದಿಸಲು ತಿಳಿದಿಲ್ಲ
"ದಮ್ಮಯ್ಯ ದತ್ತಯ್ಯ ದೇವನಂ ಮುರಿಯದಿರಿ"
ಎಂದಂದು ಮೊರೆಯಿಟ್ಟ ಹೇಡಿಗಳು; ಹೇಡಿಗಳ
ಮರೆಯಲಿಹ ಪರಮಾತ್ಮ! ಜುಟ್ಟು ಜನಿವಾರದಲಿ
ಜಾತಿಯಂ ಹಿಡಿದಿಹಿರಿ, ಮಾನವಂ ಬಿಟ್ಟಿಹಿರಿ
ಹರಕೆಗಳ ಬೇಡುವಿರಿ! ಹೇಡಿ ಜನರಿಗೆ ತಕ್ಕ
ಈ ಮುರುಕು ದೈವಗಳು.

[ನಾಗರಿಕನು ಹೊರಟುಹೋಗುವನು.]

ಜನ— ಏನಯ್ಯ ಬೆಪ್ಪಾಗಿ
ನಿಂದಿರುವೆ? ಬೈಗಳ ಸುರಿಮಳೆಯಂ ಸೂಸಿದನು
ಚಲಿಸದೆಯೆ ನಿಂದಿರುವೆ.

ಜನ— ಹಿಡಿದವನ ನಿಲ್ಲಿಸದೆ
ಬಿಡಲುಂಟೆ?

ಜನ— ತೀಡಬೇಕೆರಡೆಂದು ಮನಮಾಯ್ತು
ಅನಿತರಲಿ ಪೋದನವ.

ಜನ— ಆಯ್ತಾಯ್ತು ಮಂಗಳಂ
ಮೂದೇವಿಗಳ ಮುಖಕೆ! ಮಾತೇನು!

ಜನ— ಹುಚ್ಚನವ
ಅವನೊಡನೆ ಸರಿಜೋಡಿ ನಿಲ್ಲುವುದೆ?

ಜನ— ಅಹುದಹುದು
ಹುಚ್ಚನಲ್ಲದೊಡವನು ಹೀಗೇಕೆ ಮಾಡುವನು?
ಒಮ್ಮೊಮ್ಮೆ ಕೂಗುವುದು, ಮತ್ತೊಮ್ಮೆ ರೋದಿಪುದು
ಮತ್ತೆ ತಾ ಬಯ್ಯುವುದು.

ಜನ— ಅಹುದಹುದು. ಮೊದಲೆಮಗೆ
ತಿಳಿವಿಲ್ಲ, ಹುಚ್ಚನೊಡನಾಡಿದರೆ ನಾವೆಲ್ಲ
ಹುಚ್ಚಹೆವು.

ಜನ— ಅಲ್ಪವಿದ ತಿಳಿಯದೆಯೆ ತಿರುಗಿದೆವು
ಹುಚ್ಚಾಗಿ.

ಜನ— ಆಯ್ತಾಯ್ತು ಸಾಕಿನ್ನು, ತೆರಳೋಣ.

ದೃಶ್ಯ ೪

[ಹಜಾರ ರಾಮಸ್ವಾಮಿಯ ದೇವಸ್ಥಾನ. ರಾತ್ರಿ—ಬೆಳದಿಂಗಳು. ನಾಗರಿಕ.]

ನಾಗರಿಕ— ಮಗುದೊಂದು ಪಾಳ್ಗುಡಿಯು ಗುಡಿಗಳ ಕೊರತೆಯಿಲ್ಲ
ಕಲ್ಲಿಹವು, ಮುರುಕು ಗೋಡೆಗಳಿಹವು ; ಪರಮಾತ್ಮ
ನೆಂಬವನು ಬಿಟ್ಟೋಡಿಪೋಗಿಹನು. ದೇವಂಗೆ
ನೆಲೆಯಾಗಬೇಕೆಂದು ಕಲ್ಲಿನಲಿ ಜೀವವಂ
ತುಂಬಿದರು ಶಿಲ್ಪಿಗಳು ; ಮಾದೇವನೆಮ್ಮೊಳಗೆ
ತುಂಬಲಿಲ್ಲ. ನಾವಿಂದು ಸತ್ತಿರುವ ಹೆಣವಲ್ಲ
ಬದುಕಿರುವ ಜೀವವಲ್ಲ.

[ಸುತ್ತಲೂ ನೋಡಿ ಮಂಟಪದಲ್ಲಿ ಕುಳಿತುಕೊಳ್ಳುವನು.]

ಆಯಾಸವಾಗಿಹುದು.

[ಮಲಗಿ ನಿದ್ದೆಮಾಡುವನು. ಕೆಲಕಾಲದಮೇಲೆ ತಟ್ಟಿದಹಾಗಾಗುವುದು ಕೂಗಿದ ಹಾಗಾಗುವುದು.]

ಅಶರೀರ ವಾಕ್ಕು—ಏಳೇಳು, ಏಳೇಳು.

[ನಾಗರಿಕನು ಎದ್ದು ಕುಳಿತುಕೊಳ್ಳುವನು.]

ನಾಗರಿಕ— ಆರೆನ್ನ ತಟ್ಟಿದರು ?
ಏಳೆಂದು ಹೇಳಿದರು. ನಿಜವಾಗಿ ತಟ್ಟಿದರೆ?

[ಸ್ವಲ್ಪ ಹೊತ್ತು ನೋಡಿ.]

ಒಮ್ಮೆ ತಾ ಬಂದವರು ಬಾರದಿಹರೇ ಮರಳಿ?

[ಪುನಃ ಮಲಗುವನು.]

ಅ. ವಾಕ್ಕು— ಏಳೇಳು, ಏಳೇಳು.

ನಾಗರಿಕ— ಮತ್ತೆ ಬಿದ್ದುದು ಪೆಟ್ಟು.

[ಎದ್ದು ಕುಳಿತುಕೊಳ್ಳುವನು.]

ನೋಯುತಿರುವುದು ಬೆನ್ನು. ಪಾಳುಗುಡಿಯಲ್ಲಾರು
ಸೇರಿಹರೊ! ಭೂತವೋ ಪ್ರೇತವೋ? ಏನೊಂದು
ಕಾಣಿಸದು; ಮರೆಯಿಂದ ಕಾಡಿಪುದು. ಗಾಳಿಯೇಂ
ಸುಯ್ಯುತಿದೆ, ಮರವೆಲ್ಲ ತೂಗುತಿವೆ, ಭೂಮಿಯಿದು
ನಡುಗುತಿದೆ. ನಿಲ್ಲುವುದು ತರವಲ್ಲ. ಎತ್ತಲೇಂ
ತಳ್ಳುವುದೊ ಬಿರುಗಾಳಿ.

[ಇಳಿದು ದೂರ ನಿಲ್ಲುವನು—ಮಂಟಪವು ಕುಸಿದು ಬೀಳುವುದು.]

ಅಕಟಕಟ! ಮಂಟಪವೆ!
ಎನ್ನ ಗತಿ ತೀರಿತ್ತು; ಚಣದಲ್ಲಿ ತೀರಿತ್ತು!
ತಿಳಿಯದೆಯೆ ಪವಡಿಸಿದೆ. ಆರವನು ಕರುಣಾಳು!
ಏಳೇಳು ನೀನೆಂದು ಮುಂದಾಗಿ ಕೂಗಿದನು
ತಟ್ಟಿ ಕೂಗಿದನವನು; ಮುಂದೊದಗುವಾಪತ್ತ
ತಿಳುಹಿದನು ಸಲಹಿದನು. ಆರೆಂದು ತಿಳಿಯುವೆನು?
ಜನರಹಿತವೀ ಗುಡಿಯು, ನರಪಿಳ್ಳೆಯೊಂದಿಲ್ಲ!
ದೇವನೇಂ ಸಲಹಿದನೆ? ಕರುಣವೇನನಿತುಂಟೆ?
ಅಣುವೊಳಗೆ ಅಣು ನಾನು, ಎನ್ನ ರಕ್ಷಿಸಲೇಕೆ?
ಹುಲುಮನುಜನೆನ್ನೊಳಗೆ ದೇವಂಗೆ ದಯೆಯೇಕೆ?
ತಿಳಿಯದಿದು ಅಕಟಕಟ. ಬಂದು ತಟ್ಟಿದುದುಂಟು!
ಬಂದು ಕೂಗಿದುದುಂಟು! ಹಾ ದೇವ! ಹಾ ದೇವ!
ಸಾಮ್ರಾಜ್ಯಲಕ್ಷ್ಮಿಯೊಳ್ ಮರುಕವಂದಿರಲಿಲ್ಲ?
ಅಂದೇಕೆ ಕಾಪಿಡಲು ಬರಲಿಲ್ಲ?

[ಮರೆಯಿಂದ ಗಟ್ಟಿಯಾದ ಧ್ವನಿಯಲ್ಲಿ ಉತ್ತರವು ಬರುವುದು. ದೇವರು.]

ದೇವರು— ಎನ್ನಿಚ್ಛೆ
ಕೇಳಲಿಕೆ ನೀನಾರು?

[ನಾಗರಿಕನು ಸ್ವಲ್ಪ ಹೊತ್ತು ಸ್ತಂಭಿತನಾಗುವನು.]

ನಾಗರಿಕ— ಏನಿದೀ ಗರ್ಜನೆಯು?
ಆರಿಹರೊ ಗುಡಿಯಲ್ಲಿ? "ನೀನಾರು? ಬಾ ಇಲ್ಲಿ"
ಸದ್ದಿಲ್ಲ, ಆರುಮೇಂ ಬರಲಿಲ್ಲ, ಉತ್ತರವ
ಕೊಡಲಿಲ್ಲ. ದೇವನೋ ದೆವ್ವವೋ ಇರಲಿರಲಿ.
ಭೂತಗೀತಗಳಿಗಂಜುವುದಿಲ್ಲ. ನಿಂತಿಲ್ಲಿ
ನೋಡುವೆನು.

[ದೇವರು ಪ್ರವೇಶಿಸುವನು.]


ಕಣ್ಣುಚುಚ್ಚುವ ಬೆಳಕು, ಆರೀತ?

[ಹಿಂದಕ್ಕೆ ಸರಿಯುವನು.]

ದೇವರು— ಕೇಳಲಿಕೆ ನೀನಾರು?

[ದೇವರು ದಿಟ್ಟಿಸಿ ನೋಡುವನು. ನಾಗರಿಕನಿಗೆ ಕಣ್ಣೀರು ತುಂಬುವುದು.]

ನಾಗರಿಕ— ಆರಾದೊಡೇಂ ನಿನಗೆ?
ಕೇಳುವುದೆ. ಕೇಳಲಿಕೆ ಹಕ್ಕುಂಟು—ಕೇಳುವುದೆ.
ಈ ನಮ್ಮ ನಾಡಂತೆ ಬೇರೊಂದು ನಾಡುಂಟೆ?
ವೇದಗಳ ತೌರೂರು ಯಾಗಗಳ ನೆಲೆವೀಡು
ದೇವ ಭಾಷೆಯ ಕೆಚ್ಚು ವೇದಾಂತ ಮಾರ್ಗಗಳು
ಅವತಾರ ಲೀಲೆಗಳು ಮತ ಶತದ ಜನ್ಮಗಳು
ಸತ್ಯದಲಿ ಧರ್ಮದಲಿ ಭೋಗದಲಿ ಭಾಗ್ಯದಲಿ
ಈ ನಮ್ಮ ನಾಡಂತೆ ಬೇರೊಂದು ನಾಡುಂಟೆ?
ಪುಣ್ಯ ಭೂಮಿಯಿದೆಂದು ಋಷಿವರರು ಚರಿಸಿದರು
ಆಚಾರ್ಯರುದಿಸಿದರು ತತ್ವಗಳ ತಿಳುಪಿದರು
ಮಾಪುರುಷರೆನಿಬರೊ ಭಕ್ತಜನರೆನಿಬರೊ
ಮಹಿಮೆಯಂ ಬೀರಿದರು ದೇವನಂ ಪಾಡಿದರು.
ಕರ್ಮ ಭೂಮಿಯಿದೆಂದು ವೀರರವತರಿಸಿದರು
ವಾಸವನ ಸೋಲಿಸುವ ವೈಭವದಿ ಮೆರೆದವರು
ಸಾರ್ವಭೌಮರ ಸಾಲು ಚಂದ್ರ ಸೂರ್ಯರ ವಂಶ



ಹಜಾರ ರಾಮಸ್ವಾಮಿಯ ದೇವಸ್ಥಾನ

ಸತ್ವದಲಿ ಶೌರ್ಯದಲಿ ಧೈರ್ಯದಲಿ ವೀರ್ಯದಲಿ
ಈ ನಮ್ಮ ನಾಡಂತೆ ಬೇರೊಂದು ನಾಡುಂಟೆ?
ಅಚ್ಚರಿಯ ರೂಪಿನಲಿ ಸುಗುಣದಲಿ ಶೀಲದಲಿ
ಹದಿಬದೆಯರೆನಿಬರೊ ಸೂರ್ಯನಂ ತಡೆದವರು
ಯಮನನ್ನು ಗೆದ್ದವರು, ಹರಿಯುಜಮಹೇಶರನು
ಶಿಶುಗಳಂ ಮಾಡಿದರು ಕೀರ್ತಿಯಂ ಬೆಳಗಿದರು
ಈ ನಮ್ಮ ನಾಡಂತೆ ಬೇರೊಂದು ನಾಡುಂಟೆ?
ಕೇಳಲಿಕೆ ನೀನಾರು! ಆರು ಕಟ್ಟಿದ ರಾಜ್ಯ?
ಆರು ಸಲಹಿದ ಧರ್ಮ? ಕಳ್ಳರೇ ಕೊರಮರೇ
ಯತಿವರರು ಗುರವರರು ಶೃಂಗಗಿರಿ ಪೀಠದಲಿ
ಆದಿಶಂಕರರೆಡೆಗೆ ಬಂದವರು? ಬರಿದೇಕೆ
ಗರ್ಜನೆಯು? ಗರ್ಜನೆಗೆ ಹೆದರುವೆನೆ?

ದೇವರು— ಮೆಚ್ಚಿದೆನು
ಮೆಚ್ಚಿದೆನು. ದೇವನಿದೆ ಬಂದಿಹೆನು, ಕಾಪಿಡಲು
ಬಂದಿಹೆನು.

ನಾಗರಿಕ— ದೇವನೇಂ? ದೇವನಪ್ಪೊಡೆ ತೋಳ
ಬಲವುಂಟೆ? ಮನವುಂಟೆ ಸಂಹಾರ ಲೀಲೆಯಲಿ?

ದೇವರು— ವರಗಳಂ ನೀಡುವೆನು, ಬೇಕಾದುದಂ ಬೇಡು.

ನಾಗರಿಕ— ಬೇಡುವವ ನಾನಲ್ಲ, ದೇವನೆಂಬವನಿಲ್ಲ.

ದೇವರು— ಸತ್ಯದಿಂ ಪೇಳುವೆನು ದೇವನೆಂಬವನುಂಟು.

ನಾಗರಿಕ— ನಮ್ಮ ದೇಶದೊಳಿಲ್ಲ, ಪೋಗಿಹನು ಬೇರೆಡೆಗೆ
ಭರತಖಂಡದಿಯೆಂದೊ ಹೆದರಿ ಓಡಿದನವನು.

ದೇವರು— ಓಡಿಲ್ಲ ನಿಂದಿಹನು, ದೇವನಂ ನಂಬುವುದು.

ನಾಗರಿಕ— ದೇವನಂ ನಂಬಿದೆವು ರಾಜ್ಯವಂ ನೀಗಿದೆವು!
ಆ ದೇವನೆಂಬವಗೆ ಸತ್ಯಧರ್ಮಗಳಿಲ್ಲ

"ಅವತಾರಮಾಡುವೆನು ಧರ್ಮವದು ಲೋಪಿಸಲು
ಉದ್ಧಾರ ಮಾಡುವೆನು" ಎಂದು ಸಾರಿದನವನು.
ಅವತಾರ ಮಾಡಿದನೆ? ಬಂದು ಸಲಹಿದನೆ?
ಮಾತೃಭೂಮಿಯಿದೆಂದು ಕರಗಿದನೆ? ಮರುಗಿದನೆ?
ಧರ್ಮವನು ರಾಜ್ಯವನು ಅನ್ಯರಿಗೆ ತೆರಿಸಿದನು,
ಯವನರಿಗೆ ಹೆದರಿದನು ಹೇಡಿಯಾಗೋಡಿದನು.
ಇನ್ನು ನಂಬುವುದುಂಟೆ ಆ ಹೇಡಿ ದೈವವನು.

ದೇವರು— ಎನ್ನ ಬಲ್ಲವರಿಲ್ಲ ಎನಗೆ ಬಲ್ಲಿದರಿಲ್ಲ
ನಂಬಲರಿಯರು ನರರು, ನಂಬಿ ಕೆಟ್ಟವರಿಲ್ಲ.

ನಾಗರಿಕ— ನಿನ್ನ ನಂಬುವುದೇಕೆ? ಆಶ್ರಯವು ನಮಗೇಕೆ?
ಬಾಹುದಂಡಗಳಲ್ಲಿ ನಂಜಿಕೆಯನಿಡೆ, ಲೇಸು
ತಾನಹುದು. ಹತ್ತಾರು ರಾಜ್ಯವಂ ಚಕ್ರಾಧಿ
ಪತ್ಯವಂ ಕಟ್ಟುವೆವು ನಾವಿಂದು, ಹಂಗಿನೊಳು
ನಾವಿರೆವು. ನಿನಗಿಂತ ಮಿಗಿಲಾದ ದೇವನಂ
ಸೃಷ್ಟಿಸುತ ಲೋಕಗಳ ಸೃಷ್ಟಿಸುತ ಧಾತೃವಿಗೆ
ಧಾತೃವೆನಿಸುತಲೀಗ ಕೌಶಿಕನ ಸಾಹಸವ
ತೋರುವೆವು. ಕೈಕಟ್ಟಿ ಕುಳ್ಳಿಹರು ನಾವಲ್ಲ
ಅವತಾರಮಾಡೆಂದು ಬೇಡುವವರಾವಲ್ಲ
ನೀನಿನ್ನು ಬೇಕಿಲ್ಲ. ನಿನ್ನೆಡೆಗೆ ಪೋಗುವುದು
ಸುಖದಿಂದ ಬಾಳುವುದು ನಿದ್ರೆಯಂ ಮಾಡುವುದು.

ದೇವರು— ನಾನು ಕಣ್ಮುಚ್ಚಿದೊಡೆ ಉಳಿಯುವುವೆ ಲೋಕಗಳು?
ನಿದ್ರೆಯೆಂಬುದನರಿಯೆ ಸುಖಲೇಪವಿಲ್ಲೆನಗೆ.
ಸರ್ವ ಜೀವರ ಕರ್ಮಸಾಕ್ಷಿಯೆಂದೆನಿಸಿಹೆನು.

ನಾಗರಿಕ— ಅಹುದಹುದು ಬಲ್ಲೆನದ. ಗೋವುಗಳ ಕೊಲ್ಲುತಿರೆ
ಸಾಕ್ಷಿಯಾಗಿಹೆ ನೀನು!

ದೇವರು— ಪುಟ್ಟುವುವು ಸಾಯುವುವು

ಜೀವ ರಾಶಿಗಳೆಲ್ಲ. ಅದರೊಳಗೆ ಪಿರಿದೆಂದು
ಕಿರಿದೆಂದು ಆವುದಂ ನೋಡುವುದು ? ಸರ್ವ ಸಮ
ತೆಯಲಿಹೆನು ಸರ್ವ ಜೀವರಲಿಹೆನು. ಕಾಲಗತಿ
ಅನುಸರಿಸಿ ಧರ್ಮವದು ಬೆಳೆಯುವುದು, ಎನ್ನಾಜ್ಞೆ.
ಇದ ಮೀರಲಳವಲ್ಲ.

ನಾಗರಿಕ— ಮೀರುವೆವು ನಾವಿಂದು.

ದೇವರು— ಮೀರುವಿರಿ ನೀವಿಂದು! ಮೀರುವುದ ನೋಡುವೆನು.

[ದೇವರು ನಕ್ಕು ಹೊರಟುಹೋಗುವನು.]

ನಾಗರಿಕ— ಗೋಪಾಲನೆಂದೇಕೆ? ಗೋಹತಕನೆಂದಾಡೆ
ನಿನಗೀಗ ಸರಿಯಹುದು.

[ಮುಂದೆ ನೋಡುವನು.]

ಎತ್ತ ಪೋದನೊ ಕಾಣೆ.
ಆರಿವನು ಬಂದವನು? ಬಲು ಮಾತನಾಡಿದನು.
ಭೂತಗಳು ವೇಷದಲಿ ಬರುವುವೆಂದಾಡುವರು,
ಹಿಂದೆ ಸತ್ತವರಲ್ಲಿ ಪೂಜಾರಿಯಾಗಿರ್ದು
ದೇವನೇ ತಾನೆಂದು ಹುಚ್ಚು ಹಿಡಿದಿರಬಹುದು;
ಜೀವದಾಸೆಗಳೆಲ್ಲ ಬದುಕಿರಲು ತೀರದೆಯೆ
ಸತ್ತಮೇಲೀರೀತಿ ತೋರಿ ಬರುವುವೊ ಏನೊ!

[ಯಮನು ಪ್ರವೇಶಿಸುವನು.]

ಮುಂದಾರೊ ನಿಂದಿಹರು.

[ನಾಗರಿಕನು ಹಿಮ್ಮೆಟ್ಟುವನು.]

ಯಮ— ಆರೆಂದು ತಿಳಿದಿರುವೆ?

ನಾಗರಿಕ— ಬಲ್ಲೆ ನೀನಾರೆಂದು, ಧರ್ಮದೇವನು ನೀನು
ಕಾಯಕಾಂತಿಯು ಕರಿದು, ಮೃತ್ಯುವಿನ ಪಾಶವಂ
ಪಿಡಿದು ನೀ ಬಂದಿರುವೆ, ಅಡಕಿರುವೆ ತೋರಗದೆ

ಭುಜದಲ್ಲಿ. ದಾಕ್ಷಿಣ್ಯವಿಲ್ಲದೆಯೆ ದಂಡಿಸುವೆ
ದೇವರಲಿ ನೀವಿಂಗಿಲು. ಸಾಷ್ಟಾಂಗವಂದನೆಯು
ನಿನಗಿರಲಿ ಯಮರಾಜ.

[ನಮಸ್ಕಾರ ಮಾಡುವನು.]

ಯಮ— ಬಂದಿಹೆನು, ಒಯ್ಯುವೆನು
ನರಕಕ್ಕೆ.

ನಾಗರಿಕ— ತಪ್ಪೇನ ಮಾಡಿದೆನು ಯಮರಾಜ?
ನರಕವೆಂದರೆ ಅಂಜೆ; ಬರುತಿಹೆನು, ಬರುತಿಹೆನು.

ಯಮ— ದ್ರೋಹವನು ದೈವದಲಿ ಎಣಿಕೆಮಾಡಿದೆ ನೀನು,
ದೋಷರಹಿತನು ದೇವ. ನಡೆಯೆನ್ನ ನರಕಕ್ಕೆ.

ನಾಗರಿಕ— ನರಕವೆಂಬುದು ನಮಗೆ ಹೊಸತಲ್ಲ; ನರಕವೆಂ
ದೇಕೆ ನೀ ಹೆದರಿಸುವೆ? ನಿತ್ಯದಲಿ ಬಾಳಿನಲಿ
ನರಕಯಾತನೆಯಿಹುದು. ಪರತಂತ್ರರಾದವರು
ಸುರಲೋಕ ಸೌಖ್ಯವಂ ಪಡೆದಿಹರೆ ಯಮರಾಜ?
ನಮ್ಮನೀಯುಪದೆಸೆಗೆ ತಂದವನು ಪರಮಾತ್ಮ;
ದೋಷಭರಿತನು ದೇವ ಜಗಕೆಲ್ಲ ತಿಳಿದಿಹುದು.
ಪರಮಾತ್ಮ ನಮ್ಮವನು, ಅಡಿಗಡಿಗೆ ಬಂದಿಲ್ಲ
ತೋರಿಹನು ಸಲಹಿಹನು ಭಕ್ತಕೋಟಿಯನೆಂದು
ಸಾರಿಹರು. ಆ ದೇವನೊಲಿಯಲೆಂದಾಸೇತು
ಪರ್ಯಂತ ಕಟ್ಟಿಹೆವು, ಕೋಟಿ ಸಂಖ್ಯೆಯಲಾವು
ದೇಗುಲವ, ಸುಂದರದ ಮಂದಿರ ಶ್ರೇಣಿಗಳ.
ವೇದದಲಿ ಶಾಸ್ತ್ರದಲಿ ನಾನಾಪುರಾಣದಲಿ
ತುತಿಸಿಹೆವು, ಮತ್ತೆಮಗೆ ಪಾರತಂತ್ರ್ಯದ ಬಲೆಯು
ಸುತ್ತಿಹುದು. ದೋಷಭರಿತನು ದೇವ, ಮೊದಲವನ
ಎಳೆತಂದು ನರಕದಲಿ ದೂಡುವುದು ಯಮರಾಜ.

ಯಮ— ಹೇಳಲಿಕೆ ನೀನಲ್ಲ, ನಡೆಯೆನ್ನ ಲೋಕಕ್ಕೆ
ಕಾಣುವರು ನೋಡಲ್ಲಿ, ಕಾದಿ ನಿಂದಿಹರಲ್ಲಿ.

[ಯಮದೂತರ ದೃಶ್ಯ—ನಾಗರಿಕನು ಬೆಚ್ಚಿ ಬೀಳುವನು.]

ಭಟರೊಳಗೆ ಭಟರವರು, ಎನ್ನವರ ಕಯ್ವಾಟ
ನೀನರಿಯೆ.

ನಾಗರಿಕ— ಅವರ ನೀ ತೋರದಿರು ಯಮರಾಜ.
ನಿನ್ನ ದೂತರೇ ಕರುಣೆಗಳು. ಇಲ್ಲಿರುವ ಭಟ
ಶಿರೋಮಣಿಗಳಂ ನೀ ಕಂಡರಿಯೆ.

ಯಮ— ಕತ್ತಲೆಯ
ಕೂಪದಲಿ ತಳ್ಳುವೆನು.

ನಾಗರಿಕ— ಸುತ್ತಲುಂ ಕವಿದಿಹುದು.
ಪಾತಾಳ ಬಿಲದಲ್ಲಿ ಕಾಡಿಗೆಯ ರಾಶಿಯಂ
ಕೂಡಿಹರು. ಯಮಧರ್ಮರೆನಿಬರೋ ಬಸಿರಲ್ಲಿ
ಸೇರಿಹರು ಲಕ್ಷೋಪಲಕ್ಷದಲಿ; ದುಸ್ಸಹದ
ಕೂಪದಲಿ ಕಾಳಕತ್ತಲೆಯಲ್ಲಿ ಹಿಂಸಿಪರು.
ಮೃತ್ಯುವಿನ ಜಠರಮುಂ ಮಾಕಾಳಿಯುದರಮುಂ
ನೋಡಿದೆನು ಯಮರಾಜ; ಬಂದು ಧುಮುಕುವೆನೀಗ.
ನಮ್ಮ ನಾಡಿದು ನರಕ, ನಿನ್ನ ನರಕವೆ ನಾಕ
ಹೆದರಿ ಸಾಯುವುದೇಕೆ? ಆಸ್ತಿಕನು ನಾನಲ್ಲ.

ಯಮ— ಆಸ್ತಿಕರು ನಾಸ್ತಿಕರು ಭೇದವಿಲ್ಲದೆ ಬಂದು
ಪುಣ್ಯ ಪಾಪವ ತಿಳಿದು ತೆರಳುವರು, ಸುಖ ದುಃಖ
ಭಾಗಗಳ ಭೋಗಿಪರು.

ನಾಗರಿಕ— ಕನಸಿನಲಿ ನೆನಸಿನಲಿ
ಪುಣ್ಯಪಾಪಗಳೆಂದು ಆಸ್ತಿಕರು ಹೆದರಿರಲು
ಹೆದರುವರ ಮೇಲ್ಹಾಯ್ದು ಕಪ್ಪೆ ತಾ ಬಿದ್ದಂತೆ
ಮತ್ತೆ ಬೀಳುವೆ ನೀನು. ಕಂಡಿಹೆನು ಪೌರುಷವ!

ವೈದಿಕರ ಹೆದರಿಸುವೆ, ಶಿಶುಗಳಂ ಸೆಳೆದೊಯ್ದು
ಪಿತೃವರ ನೋಯಿಸುವೆ, ವೈಧವ್ಯ ದುಃಖಮಂ
ಬಾಲೆಯರಿಗಾಗಿಸುವೆ. ನಿಷ್ಕರುಣಿ! ನಿಷ್ಕರುಣಿ!!

ಯಮ— ಧರ್ಮಜ್ಞನಾಗಿಹೆನು, ಧರ್ಮದಿಂ ದಂಡಿಪೆನು
ಕರ್ಮಫಲವನು ತಿಳಿದು.

ನಾಗರಿಕ— ಧರ್ಮದಿಂ ದಂಡಿಪೆಯ?
ಸತ್ವಶಾಲಿಗಳಲ್ಲ ಸೆರೆನಾಡ ಜಯಿಸಿಲ್ಲ
ಪರದೇಶವಾಳಿಲ್ಲ ಪರಹಿಂಸೆ ತಿಳಿದಿಲ್ಲ;
ನಮ್ಮನಲ್ಲವೆ ನೀನು ನರಕದಲಿ ದೂಡುವುದು?
ಗೋಹತ್ಯೆ ಮಾಡಿದರು ರಾಜ್ಯವಂ ಕಟ್ಟಿದರು
ಗೋಪೂಜೆ ಮಾಡಿದರು ರಾಜ್ಯವಂ ನೀಗಿದರು
ಧರ್ಮರೂಪನು ನೀನು ಧರ್ಮಸೂಕ್ಷ್ಮವ ಹೇಳು.

ಯಮ— ಧರ್ಮಸೂಕ್ಷ್ಮದ ಪರಿಯು ಅತಿಗಹನವಾಗಿಹುದು
ಸುಲಭದಲಿ ತಿಳಿಯದದು ಸಂತಾಪತಪ್ತರಿಗೆ.

ನಾಗರಿಕ— ಸಂತಾಪಪಡುವುದಕೆ ದೇವನೇ ಕಾರಣನು.
ಸುಳ್ಳಾಡಿ ಮರೆಯಾದ, ಅಹಿತರಿಗೆ ನೆರವಾದ
ಆರ್ಯಧರ್ಮವ ಹಳಿದ, ಅನ್ಯಧರ್ಮವ ತಂದ.
ಘೋರಪಾತಕಿಯವನು ಸುಲಭದಲಿ ತಿಳಿಯುವುದು.
ಆತನಂ ಎಳೆತಂದು ನರಕದಲಿ ದೂಡುವುದು!

ಯಮ— ಕಾರ್ಯವದು ದುಸ್ಸಾಧ್ಯ.

ನಾಗರಿಕ— ಹೇಡಿಯಲ್ಲವೆ ನೀನು?
ಕೈಲಾಗದರ ಮೇಲೆ ಭೀತ ಮನುಜರ ಮೇಲೆ
ಪೌರುಷವ ತೋರಿಸುವೆ, ಕೈಮುಗಿದು ಹಣ್ಣುಕಾ
ಯಿಗಳನರ್ಪಿಸುವ ಕೀಟಗಳ ಮೇಲಧಿಕಾರ
ತೋರಿಸುವೆ, ಪಾಪಿಗಳ ಮಾತಿಂಗೆ ಪೋಗದಿಹೆ;
ಅಂಜುತಿಹೆ. ಪಾತಕಿಯರಲ್ಲಗ್ರಗಣ್ಯನು

ಲೋಕದೊಳಗೆಲ್ಲ ಭಗವಂತನೆಂಬವನು.
ನಿರಂಕುಶನಾಗಿಹನು ಹುಚ್ಚಾಟವಾಡುವನು;
ಮಕ್ಕಳಾಟದ ರೀತಿ ಲೋಕಗಳ ಸೃಷ್ಟಿಸುತ
ಕೆಡಿಸುತ್ತ ಕಾಲವಂ ಕಳೆಯುವನು. ಇವನಾಟ
ಆಪತ್ತುಗಳು ನಮಗೆ. ಧರ್ಮವಂ ತಿಳಿದವನು
ಧರ್ಮರಾಜನು ನೀನು, ಇಚ್ಛಾಪುರುಷನವನು
ತಕ್ಕ ದಂಡನೆಯುಂಟೆ? ಮಾಡಲೇಂ ಮನವುಂಟೆ?

[ಯಮನು ಹೊರಟು ಹೋಗುವನು.]

ಅಕಟಕಟ! ಮರಳಿದನು ಯಮರಾಜ. ಯಮರಾಜ!
ಮತ್ತಾರು ಕೇಳುವರು? ಪಾಪ ಪುಣ್ಯಗಳನರಿತು
ದಂಡಿಸುವ ದೇವ ನೀನೋಡಿದರೆ ಮತ್ತಾರು
ಕೇಳುವರು? ಮತ್ತೇನ ಮಾಡುವುದು? ಧರಣಿಯಲಿ
ಯಜ್ಞಯಾಗಾದಿ ಕರ್ಮಗಳಿಲ್ಲ, ಅಮರರಿಗೆ
ಹವ್ಯಕವ್ಯಗಳಿಲ್ಲ. ಕ್ಷಾಮಪೀಡಿತರವರು!
ಬಲವುಂಟೆ? ಧೈರ್ಯ ಸಾಹಸವುಂಟೆ? ಮುಟ್ಟಿದೊಡೆ
ಸಾಯುತ್ತ ಭೀತಿಯಿಂದೋಡುತ್ತ, ಅಜ್ಞಾನಂ
ಮರೆಹೊಗುವ ದೇವತತಿಯೊಂದೆ ಭಾರತೀಯರು
ಒಂದೆ. ಈ ದೇವರನು ಪೂಜಿಸುವ ಜಾನಿಸುವ
ನರರೆಂತು ವೀರರಹರೆಂತು ಶೂರರಹರು!

[ನಾಗರಿಕನು ಹೊರಟು ಹೋಗುವನು.]

ದೃಶ್ಯ ೫

[ಪಂಪಾಸರೋವರದ ಬಳಿ ನಾಗರಿಕನ ಪ್ರವೇಶ.]

ನಾಗರಿಕ— ರಾಮ ಪಾದಗಳಿಂದ ಪಾವನವು ಸೋಪಾನ
ಬಾಷ್ಪವಾರಿಗಳಿಂದ ಪಾವನವು ಸರಸಿಯಿದು
ರಘುವರನ ಶೋಕಮಂ ಸುಂಗಿಹುದು. ಮೆಲುಮೆಲನೆ
ತೆರೆಯು ಮರೆಯಿಂದ ದನಿ ಗದ್ಗದಿಸಿ "ಮೈಥಿಲೀ
ಜಾನಕೀ" ಎಂದುಸುರಿ ಸುಯ್ಯುವುದು.

[ಕಿವಿಗೊಟ್ಟು ಕೇಳುವನು.]

ದೂರದಿಂ
ಮಾರ್ದನಿಯುಂ. "ಹಾ ಸೀತೆ, ವೈದೇಹಿ" ಎನುತಲೀ
ಬೆಟ್ಟಗಳು ಶೋಕದಿಂ ನಿಟ್ಟುಸಿರ ಬಿಡುತಿಹವು.
ಭೂರುಹದ ಶಾಖೆಗಳು ಭೂಧರದ ಕಂದರವು
ಭೂಸುತೆಯ ಶೋಕಮಂ "ಹಾ ರಾಮ! ಹಾ ರಾಮ!"
ಎಂಬಾರ್ತಮಂ ಪೇಳುತಿಹವಿಲ್ಲಿ.

[ಮುಂದೆ ಸ್ವಲ್ಪ ದೂರದಲ್ಲಿ ಋಷಿಗಳು ತಪಸ್ಸಿನಲ್ಲಿರುವುದು ಕಾಣುವುದು.]

ಋಷಿವರರು!
ತಪದಲ್ಲಿ ಕುಳ್ಳಿಹರು. ಈ ಕಾಲದಲಿ ತಪವ
ನೆಸಗುತ್ತ ಗೋಚರಿಪ ಋಷಿಗಳೆಂಬವರುಂಟೆ!

[ಋಷಿಗಳು ತಪಸ್ಸಿನಿಂದ ಎಚ್ಚರಗೊಳ್ಳುವರು.]

ವಂದಿಪೆನು ವಂದಿಪೆನು ಋಷಿವರ್ಯ, ಮನ್ನಿಪುದು
ಭಂಗವಾದುದೆ ತಪವು?

ಋಷಿ— ತಪಕೆ ಭಂಗವದಿಲ್ಲ.
ನಿನ್ನಾರು ಕರೆತಂದರೀಯೆಡೆಗೆ? ಸಂಚಾರ
ರಹಿತವಿದು.

ನಾಗರಿಕ— ಆರೆನ್ನ ತರುವವರು ? ರಮಣೀಯ
ದೃಶ್ಯವೆಂದೈತರಲು ತಮ್ಮ ದರ್ಶನವಾಯ್ತು
ಧನ್ಯವಾದುದು ಜನ್ಮ.

ಋಷಿ— ಆರಿಹರು ಲೋಕದಲಿ?

ನಾಗರಿಕ— ಆರಿಹರು ಲೋಕದಲಿ! ಚೆನ್ನಾಯ್ತು. ತಾವೆಮ್ಮ
ಲೋಕವಂ ಮರೆತಿಹಿರೆ?

ಋಷಿ— ಮನುಜಲೋಕದ ಮಾತು
ತಿಳಿದಿಲ್ಲ.

ನಾಗರಿಕ— ಇಲ್ಲೇನಮಾಡುವಿರಿ ಋಷಿವರ್ಯ?

ಋಷಿ— ದೇವನಂ ಕುರಿತಿಲ್ಲಿ ತಪವನಾಚರಿಸುವೆವು.

ನಾಗರಿಕ— ದೇವನೆಂಬವನುಂಟೆ?

ಋಷಿ— ಉಂಟವನು. ತಿಳಿದಿಲ್ಲ?

ನಾಗರಿಕ— ನೀವೇನು ಕಂಡಿಹಿರೆ?

ಋಷಿ— ಕಂಡಿಲ್ಲ, ಕಾಣುವೆವು.

ನಾಗರಿಕ— ನಂಬಿ ಈ ತಪದಲ್ಲಿ ಕುಳ್ಳಿಹಿರಿ?

ಋಷಿ— ಆತುರಕೆ
ಮೈದೋರುವವನಲ್ಲ.

ನಾಗರಿಕ— ಅಹುದಹುದು ಭೀತಿಯಿಂ
ಅಡಗಿಹನು, ಬರಲೊಲ್ಲ!

ಋಷಿ— ಸಿದ್ಧಿಯಂ ಪಡೆದಂದು
ತಾನಾಗಿ ತೋರುವನು.

ನಾಗರಿಕ— ಆ ದೇವನೆಂಬವನು
ನಿಮ್ಮೊಡನೆ ಕಣ್ಣುಮುಚ್ಚಾಲೆಯಂ ಆಡುವನು
ನೀವವನ ನಂಬುವಿರಿ ತಪವೆಂದು ಕುಳ್ಳಿಹಿರಿ.
ಇರಲಿರಲಿ, ತಪದಲ್ಲಿ ಕುಳಿತೆನಿತು ಪೊಳ್ತಾಯ್ತು?

ಋಷಿ— ಯುಗವೆರಡು ಕಳೆದಾಯ್ತು.

ನಾಗರಿಕ ಬಾರನಿನ್ನುಂ ದೇವ?

ಋಷಿ— ಕಾಣುವೆವು, ಕಾಣುವೆವು.

ನಾಗರಿಕ— ಕಾಣುವಿರಿ, ಕಾಣುವಿರಿ!
ತ್ರೇತೆಯಲಿ ರಾಮನಿಲ್ಲಿಗೆ ಬಂದು ಪೋದುದನು
ಕಂಡಿರೇಂ ಋಷಿವರ್ಯ?

ಋಷಿ— ಕಂಡಿಹೆವು. ಸಹಜನೊಡ
ನೈತಂದು ಋಷ್ಯಮೂಕದಲಿದ್ದು ಕಪಿಸೇನೆ
ಸಹಿತದಲಿ ದಕ್ಷಿಣಕೆ ದಾಳಿಯಂ ಬೆಳಸಿದನು.

ನಾಗರಿಕ— ಆ ದಿನದಿ ದೇವಿಯರ ರಾವಣಂ ಕದ್ದೊಯ್ದು
ನಭದಲ್ಲಿ ಪಾರುತಿರೆ, ಭೀತಿಯಿಂ ದೇವಿಯರು
ರಾಮನಾಮಂಗಳಂ ಕರೆಯುತಿರೆ, ಕಣ್ಣೀರ
ಸುರಿಸುತಿರೆ, ನೋಡಿದಿರೆ ಋಷಿವರ್ಯ?

ಋಷಿ— ನೋಡಿದೆವು.

ನಾಗರಿಕ— ನೋಡಿದಿರಿ! ಕೊಲಲಿಲ್ಲ ರಾವಣನ? ದಶಶಿರನ
ಶಿರಗಳಂ ತರಿದಿಲ್ಲಿ ದಿಗ್ಬಲಿಯ ಕೊಡಲಿಲ್ಲ?
ಕಡಿದವನ ರಕ್ತಮಂ ಶಾಕಿನಿಗೆರೆಯಲಿಲ್ಲ?

ಋಷಿ— ಕಾದುವುದು ಬಾಹುಜರ ಧರ್ಮ, ತಪವೆಸಗುವುದು
ನಮ್ಮೊಂದಿಗರ ಧರ್ಮ.

ನಾಗರಿಕ— ದಯೆಯಿಲ್ಲದೀ ತಪವ
ಸುಡರೇಕೆ? ಪಕ್ಷಿಗಿದ್ದುದು ಕರುಣ. ರೆಕ್ಕೆಯಲಿ
ಕೊಕ್ಕಿಯಲಿ ಪೊಯ್ದುತ್ತು ಕಾದಿತ್ತು. ರಕ್ತಮಂ
ಕಾರಿಸಿತು ರಾಕ್ಷಸನ ಮೆಯ್ಯೊಳಗೆ. ಛಿದ್ರಿತದ
ಪಕ್ಕದಲಿ ದೇಹದಲಿ ಕೆನ್ನೀರ ಮಡುವೊಳಗೆ
ಬಿದ್ದೊಡಂ ಕುಟುಕುಜೀವದಲ್ಲಿದ್ದು ರಾಮಂಗೆ

ವಾರ್ತೆಯುಂ ಪೇಳಿದುದು. ಕಾದುವುದು ಆಗದೊಡೆ
ಶಾಪಮಂ ಕೊಡದೇಕೆ ಮರೆತಿರ್ಪೈ ಋಷಿವರ್ಯ?
ಅಡಗಿದಿರಿ ಗುಹೆಯಲ್ಲಿ ಮರೆಯಲ್ಲಿ.

ಋಷಿ— ಶಾಪಮಂ
ಕೊಡಲುಂಟೆ? ತಪವ ಕೆಡಿಸುವುದುಂಟೆ?

ನಾಗರಿಕ— ಸುಟ್ಟ ತಪ
ಹಾಳಾಯ್ತು! ಕೇಳದೆಯೆ ಪಕ್ಷಿಗಿತ್ತನು ರಾಮ
ಮುಕ್ತಿಯನು. ತಿಳಿವಿಲ್ಲದೆಯೆ ತಪವಗಳಿಸುವಿರಿ
ರಕ್ಷಿಪಿರಿ. ಶಾಪದಿಂ ತಡೆದಿಹಿರೆ, ರಾವಣನ
ಕಂಡಿಲ್ಲಿ ಶೋಕದಿಂ ರೋಷದಿಂ ಶಿರಗಳನು
ಚೆಂಡಾಡಿ ಏನ ಬೇಡಿದೊಡದನು ನಿಮಗಿತ್ತು
ಪೋಗದಿರುತಿರ್ದನೇಂ ಶ್ರೀರಾಮ? ಸಲಹಿದಿರಿ
ತಂದೆಗಳು, ಸಲಹಿದಿರಿ ನೀವೆಂದು ಭಕ್ತಿಯಿಂ
ಅಶ್ರುಜಲದಭಿಷೇಕಮಂ ನಿಮಗೆ, ನಿಮ್ಮಡಿಗೆ
ಮಾಡದಿರುತಿರ್ದಳೇಂ ಜಾನಕಿಯು? ನಿಮಗೆ ದಯೆ
ಯಂದು ಬರಲಿಲ್ಲ? ಭೂಮಾತೆ ಪೆತ್ತ ಮಗಳೆಂ
ಬರಿವು ತಾ ಬರಲಿಲ್ಲ? ದೈನ್ಯದಲಿ ದುಃಖದಲಿ
ಆರ್ತಳಾದಬಲೆ ಮೊರೆಯಿಡುತಿರಲು ಕಣ್ಣೀರು
ಬರಲಿಲ್ಲ?

[ಋಷಿಗಳು ತಲೆಯಲ್ಲಾಡಿಸುವರು.]

ಬರಲಿಲ್ಲ! ಒಣದೇಹ ಒಣಮರವು
ಕಣ್ಣೀರ ಹರಿಸುವುದೆ! ಕಠಿನಚಿತ್ತರು ನೀವು.

ಋಷಿ— ಶೋಕ ಮೋಹಗಳನ್ನು ಬಿಟ್ಟಿಹೆವು.

ನಾಗರಿಕ— ಬಿಟ್ಟಿಹಿರಿ?
ಶೋಕ ಮೋಹವ ಬಿಟ್ಟು ಸುಲಭದಲಿ ದೊರೆತಿರ್ದ
ಮುಕ್ತಿಯಂ ಕಳೆದಾಯ್ತು, ಯುಗವೆರಡ ಕಳೆದಾಯ್ತು.

ಮುಕ್ತಿಯುಂ ಬೇಡುವೊಡೆ ಶೋಕ ಮೋಹವ ತೊಟ್ಟು
ಧರೆಗಿಳಿದು ಪಾಮರರ ಪಾಪಿಗಳನುದ್ಧರಿಸಿ
ಆ ದೇವ ಮೆಚ್ಚುವನು. ಕುಳಿತಿಲ್ಲಿ ಫಲವಿಲ್ಲ.
ಮಾತೃಭೂಮಿಯು ನೋಡಿ ಕರುಣ ರಸ ಧಾರೆಯುಂ
ಸೂಸುವುದು.

ಋಷಿ— ಭರತಭೂಮಿಯು ನಾವು ಮರೆತಿಹೆವು.

ನಾಗರಿಕ— ಅಕಟಕಟ! ಮರೆತಿಹಿರೆ? ದಯೆಯಿಂದ ನೋಡಿರೈ
ಋಷಿಗಳಾ ಧರ್ಮವದು ಮನುಗಳಾ ಧರ್ಮವದು
ಈಗೆಲ್ಲ ಗತಿಗೆಟ್ಟು ವಿಪರೀತವಾಗಿಹುದು.
ಧರ್ಮವನು ಸಲಹಿರೈ ದಯೆಯಿಂದ ನೋಡಿರೈ.
ಸ್ವಾರ್ಥವದು ಬೆಳೆದಿಹುದು, ಭಿನ್ನತೆಯು ಮೂಡಿಹುದು.
ಧರ್ಮಮಂ ತಿಳಿಯದೆಯೆ, ಬೆಳೆಯುವುದ ತಿಳಿಯದೆಯೆ
ಧರ್ಮಾಂಧರಾಗಿಹರು, ಅಜ್ಞಾನ ಸಾಗರದಿ
ಮುಳುಗಿಹರು, ಕಣ್ಗುರುಡರಾಗಿಹರು. ನುಡಿಯೊಂದು
ನಡೆಯೊಂದು ಮನವೊಂದು, ನಿಶ್ಚಿತದ ನೆಲೆಯಿಲ್ಲ
ರೀತಿ ನೀತಿಗಳಿಲ್ಲ ಧೈರ್ಯ ಸಾಹಸವಿಲ್ಲ.
ಜನರಿವರು ಬಡತನದ ಪಂಕದಲಿ ಮಿಳಮಿಳನೆ
ಪುಳುಗಳಂತುದಿಸುವರು ಸಾಯುವರು. ಹಿಂದೆಲ್ಲ
ವೈಭವದಿ ಮೆರೆದಿಹರು, ರಾಜ್ಯಗಳ ಕಟ್ಟಿ ಸಿರಿ
ಸಂಪದಂ ತೋರಿಹರು, ದೇಶದೇಶಗಳಲ್ಲಿ
ಅರಿವನ್ನು ಹರಡಿಹರು ಧರ್ಮಮಂ ತಿಳಿಸಿಹರು
ಇಂದಿವರು ಲೋಕದಪಹಾಸ್ಯಮಂ ತಳೆದಿಹರು.
ಆರಿಗಾದೊಡಮೀಗ ನಿಗ್ರಹಾನುಗ್ರಹದ
ಬಲವಿಲ್ಲ, ಮೇಲು ಕೀಳುಗಳೆಂದು ಹೊಯ್ದಾಡಿ
ಸಾಯುವರು ಧರ್ಮದಾ ಪೆಸರಿಟ್ಟು. ಕಣ್ಣೊ ತೆರೆ
ಯದ ಪಸುಳೆ ವಿಧವೆಯುಂ ಮಾಡುವರು ವಿರತಿಯುಂ
ಬೋಧಿಪರು ಧರ್ಮದಾ ಪೆಸರಿಟ್ಟು. ವರನನ್ನು

ಕೊಳ್ಳುವರು ಮದುವೆಯೆಂದಾಡುವರು, ಬೇರೆಡೆಗೆ
ಬಾಲೆಯರ ಕದ್ದೊಯ್ದು ಮಾರುವರು, ಊರೊಳಗೆ
ಶಾಸ್ತ್ರವಂ ಮಂತ್ರವಂ ಪಾಡುವರು ಧರ್ಮದಾ
ಪೆಸರಿಟ್ಟು. ತಮ ತಮಗೆ ಪರವಧುವ ನೋಡುವರು
ಬಯಸುವರು, ಮನೆಯೊಳಗೆ ಹದಿಬದೆಯ ಧರ್ಮವಂ
ಮರ್ಮವಂ ಬೋಧಿಪರು ಧರ್ಮದಾ ಪೆಸರಿಟ್ಟು.
ಸರ್ವರಲಿ ಪರಮಾತ್ಮ ವಾಸಿಸುವನೆಂದಾಡಿ
ಸರ್ವರಿಗೆ ಭಗವಂತ ಕರುಣಾಳುವೆಂದಾಡಿ
ಹತ್ತಿರಕೆ ಕರೆಯರೈ ಕಣ್ಣಲ್ಲಿ ನೋಡರೈ
ನಾಯಿಯಾದರು ಮೇಲು, ಬೀದಿಯಲಿ ಬರುತಿಹುದು
ಕೆಲಜನರ ಸೇರಿಸರು ಧರ್ಮದಾ ಪೆಸರಿಟ್ಟು.
ಈ ಧರ್ಮ ನಮಗಿಂದು ಹೆಮ್ಮಾರಿಯಾಗಿಹುದು
ಈ ಧರ್ಮ ನಮಗಿಂದು ಸಂಕೋಲೆಯಾಗಿಹುದು
ಮಾರಿಯಂ ಬಡಿದಟ್ಟಿ ರಕ್ಷಿಪರು ಹುಟ್ಟಿಲ್ಲ
ಬಂಧನವ ಬಿಡಿಸಿಂದು ಪೊರೆಯುವರು ಬರಲಿಲ್ಲ
ದಯೆಯಿಂದ ನೋಡಿರೈ—ಧರೆಗಿಳಿದು ಬನ್ನಿರೈ.

ಋಷಿ— ದೇವಂಗೆ ಮನವಾಗೆ ಆತನೇ ಮಾಡಿಸುವ.
ಆವ ಕಾಲಕೆ ಬಂದು ಆವ ರೂಪದಿ ಬಂದು
ಸಲಹುವನೊ, ಆಗಲೇ ಬಂದಿಹನೊ, ಆರುಂಟು
ತಿಳಿದವರು?

ನಾಗರಿಕ— ಬರುವನೇ ಪರಮಾತ್ಮ? ಆಗಲೇ
ಬಂದಿಹನೆ? ಬಂದನಲ್ಲಾ ನಿಮ್ಮ ಭಗವಂತ!
ಪಾಳುದೇಗುಲದಲ್ಲಿ ಪೂಜೆಯಂ ಕೈಕೊಳುತ
ಮೌನದಿಂ ಕುಳಿತಿಹನು!

ಋಷಿ— ಕಲ್ಲು ಕಟ್ಟಡದಲ್ಲಿ
ನೆಲೆಯಾಗಿ ನಿಂದಿರಲು ದೇವನೇಂ ಬಂದಿಯೇ?
ಬಂಧಿತನು ತಾನಲ್ಲ

ನಾಗರಿಕ— ತೊಡೆ ತೋಳ ಮುರಿದಾಗ
ಹಿತವಾಗಿ ಪಡೆದನದ!

ಋಷಿ— ಕಲ್ಲು ಹೋದರೆ ದೇವ
ಹೋಗುವನೆ? ವಿಗ್ರಹಕೆ ವಿಗ್ರಹವ ಮಾಡುವರು
ಈ ನಮ್ಮ ನಾಡೊಳಗೆ ಕಲ್ಲಿಗುಂಟೇ ಕೊರತೆ
ಶಿಲ್ಪಿಗುಂಟೇ ಕೊರತೆ?

ನಾಗರಿಕ— ಯುವನರೈತರಲು ಆ
ದೇವಂಗೆ ಹಿತವಾಯ್ತು! ವರಗಳಂ ನೀಡುವನು!!
ಒರಗಿಹನು ಮೂಲೆಯುಲಿ!!

ಋಷಿ— ಯುವನರೇನನ್ಯರೇಂ?
ದೇಪಂಗೆ ನರರೆಲ್ಲ ಸಮಭಾವ. ಸರ್ವರಲಿ
ನೆಲಸಿಹನು ಸರ್ವಸಮತೆಯುಲಿಹನು. ಅವರವರ
ಪರಿಸರಣಕನುಸಾರ ಬೋಧೆಯಂ ಮಾಡಿಹನು.

ನಾಗರಿಕ— ಆ ದೇವ ನಿಮಗಿರಲಿ! ಜೋಗಿಗಳ ಕಾಡಿಸುವ
ನಾರಿಯರ ಕಾಮಿಸುವ ಆ ದೇವ ನಿಮಗಿರಲಿ.
ಬೇರೊಬ್ಬ ದೇವನಹ, ನಮಗಾತ ದೊರಕಿಹನು.

ಋಷಿ— ಆರವನು ಬೇರೊಬ್ಬ?

ನಾಗರಿಕ— ಆರಿಹರೊ ನಿಮಗೇಕೆ?
ನಮ್ಮಾತ ಪಿರಿಯಾತ, ಎಲ್ಲ ದೇವರದೇವ
ಇಹನವನು.

ಋಷಿ— ಕೇಳುವೆವು, ಕೇಳುವೆವು. ಆರಿಹರೊ?

ನಾಗರಿಕ— ಎಮಗೊಲಿದು ಬಂದಿರುವ ದೇವನಂ ಕೇಳುವಿರೆ?
ರಣದ ಕೋಲಾಹಲದಿ ಜಯಭೇರಿ ಮೊಳಗುತಿರೆ
ವಾದ್ಯಗಳು ಘೋರ್ಗರೆದು ಎಣ್ದೆಸೆಯ ತುಂಬುತಿರೆ
ಜಯಕಾಳಿ ಜಯರವವು ನಾಕವನು ಒತ್ತುತಿರೆ
ಭಟರಟ್ಟಹಾಸದಲಿ ಖಣಿ ಖಣಿಲು ಗೀತದಲಿ

ಶತ್ರುಗಳ ಆರ್ತದಲಿ ಅರಿಶಿರಂ ಕುಣಿದಾಡೆ,
ಕೆಂಧೂಳಿ ಕೆನ್ನೀರು ನಭದಲ್ಲಿ ನೆಲದಲ್ಲಿ
ತುಂಬುತಿರೆ ಹರಿಯುತಿರೆ, ಸುಳಿಗಾಳಿ ಕೂಗಿನಲಿ
ಬಿರುಗಾಳಿ ಚೀರಿನಲಿ, ಆದಿಶಕ್ತಿಯ ನಾಥ
ಮಾಕಾಳಿಯಧಿನಾಥ, ನೇತ್ರದಿಂ ಫಾಲದಿಂ
ಕಿಡಿಗಳನು ಸೂಸುತ್ತ, ಅಹಿತರನು ದಹಿಸುತ್ತ
ತಲೆಮೇಲೆ ಕಾಣುವನು, ಕಾಣುವನು ರುಂಡಮಾ
ಲಾಧರನು, ಬೆಂಬಲವ ನೀಡುವನು, ಗೆಲ್ಲುವುದ
ತೋರುವನು, ಮಹಿಮೆಯಂ ಸಾರುವನು.

ಋಷಿ— ಆಯ್ತಾಯ್ತು.
ಮಾತಿನಲಿ ಹೊಡೆದಾಡಿ ಮನುಜ ಗೆಯ್ವುವುದೇನು?
ಆಗುವುದು ಆಗಿಯೇ ತೀರುವುದು, ನಿಲ್ಲದದು.
ದೈವಸಂಕಲ್ಪಗಳು ಗುಪ್ತಗಾಮಿಗಳಾಗಿ
ಗಮಿಸುವುವು. ಅಲ್ಲಲ್ಲಿ ತೋರುವುವು, ಮತ್ತೆ ತಾ
ವಡಗುವುವು. ವಿಧಿನಿಯತ ಮಾರ್ಗದಲಿ ರೂಪದಲಿ
ರೀತಿಯಲಿ ಕಾರ್ಯವದು ನಡೆಯುವುದು. ಕೆಡಿಸುವುದು
ಮನವಾಗೆ ನಿಮಿಷದಲಿ ಕೆಡಿಸುವನು, ಕಟ್ಟುವುದು
ಮನವಾಗೆ ನಿಮಿಷದಲಿ ಕಟ್ಟುವನು ಪರಮಾತ್ಮ.
ಆತನಂ ಬಿಟ್ಟುಂಟೆ! ಬೇರೆ ಗತಿಯೆಮಗುಂಟೆ!

ನಾಗರಿಕ— ಬಹುಕಾಲ ತಪದಲ್ಲಿ ಕುಳಿಕುಳಿತು ಜಡಭರತ
ರಾಗಿ ಗೆದ್ದಲಿನ ಗೂಡಾಗಿ ವಿಷಸರ್ಪಕೆಡೆ
ಯಾಗಿ ನೀವಿಹಿರಿ; ಬಂದ ಮಾತಾಡುವಿರಿಲ್ಲಿ.
ಲೋಕಸಂಪರ್ಕವಿನಿತಿಲ್ಲ, ಲೋಕದೊಳು ನಡೆ
ಯುವುದ ನೀವರಿತಿಲ್ಲ, ಶೋಕಮೋಹಗಳಿಲ್ಲ
ಕೋಪತಾಪಗಳಿಲ್ಲ ಛಲವಿಲ್ಲ. ಏನೆಂದು
ಆಡುವಿರಿ? ಏನನ್ನು ತಿಳಿದಿಹಿರಿ? ಕಟ್ಟಿದರು
ರಾಜ್ಯವಂ ಮಾಧವರು ಆಚಾರ್ಯಮೂರ್ತಿಗಳು

ಇಲ್ಲಿಯೇ ಕಟ್ಟಿದರು ಚಕ್ರಾಧಿಪತ್ಯಮಂ
ಕೀರ್ತಿಯಂ ಗಳಿಸಿದರು ಮುಕ್ತಿಯಂ ಗಳಿಸಿದರು
ನೀವೇನ ಗಳಿಸಿದಿರಿ ಪೇಳಿರೈ ಋಷಿವರ್ಯ?
ಜಪತಪಗಳೆಂದಾಡಿ ಮೂಲೆಯಲಿ ಮಾರುದ್ದ
ಗಡ್ಡಮಂ ಗಳಿಸಿದಿರಿ.

[ಋಷಿಗಳು ಕೋಪದಿಂದ ಏಳುವರು.]

ಋಷಿ— ನಿನ್ನೀಗ ಶಪಿಸುವೆನು.

ನಾಗರಿಕ— ದೇವಿಯರ ಕದ್ದೊಯ್ದ ರಾವಣನ ಬಿಟ್ಟಿಹಿರಿ
ಶಾಪಮಂ ಕೊಡಲುಂಟೆ? ಏನೆಂದು ಶಪಿಸುವಿರಿ
ಋಷಿವರ್ಯ? ಕಲ್ಲಾಗು ನೀನೆಂದು ಶಪಿಸುವಿರೊ?
ಕಲ್ಲು ಗುಂಡಾಗುವೆನು ಅಹಿತರಾ ನೆತ್ತಿಯಂ
ಒಡೆಯುವೆನು ; "ರಾಕ್ಷಸನು ನೀನಾಗು" ಎಂದೇನು
ಶಪಿಸುವಿರೊ? ರಾಕ್ಷಸನು ನಾನಹೆನು, ಶತ್ರುಗಳ
ತಂಡತಂಡದಿ ನುಂಗಿ ಭೂಭಾರವಿಳುಹುವೆನು ;
ಏನೆಂದು ಶಪಿಸುವಿರಿ ಋಷಿವರ್ಯ? ಸಾಯುವುದು
ನೀನೆಂದು ಶಪಿಸುವಿರೊ? ಸಾಯುವೆನು, ಸತ್ತೊಡೇಂ
ಪುಟ್ಟರೇಂ? ಸತ್ತು ಪುಟ್ಟುವೆನು ಜನ್ಮಗಳನೆ
ತ್ತುವೆನು ಮಾತೃಭೂಮಿಯ ಸೇವೆಯೆಂತಾನು ಮಾ
ಡುವೆನು. ತಪದಲ್ಲಿ ಗಿಪದಲ್ಲಿ ಕುಳ್ಳಿಹನಲ್ಲ
ಮುಕ್ತಿಯನು ಬೇಡುವವ ನಾನಲ್ಲ.

ಋಷಿ— ಈ ರೀತಿ
ನವರೀತಿಯಾಗಿಹುದು. ಕೋಪ ದುಃಖಗಳಿಂದ
ಮನವೆಲ್ಲ ಕದಡಿಹುದು. ಶಕ್ತಿಯೆನಿತಿರ್ದೊಡಂ
ಪಂಕದಲಿ ಬಿದ್ದ ಮದಗಜದಂತೆ ಆತ್ಮವದು
ಮೊರೆಯಿಟ್ಟು ಕಂಗೆಟ್ಟು ಕೂಗುವುದು ; ದೇವನಂ
ದೂಷಿಪುದು, ಧರ್ಮಮಂ ದೂಷಿಪುದು. ಬಂದವರ

ದೃಷ್ಟಿಪಥದಲ್ಲಿಹವು ವಿಜಯನಗರದ ರಾಜ್ಯ
ವಾಲ್ಮೀಕಿ ಮುನಿವರರ ಜಾನಕಿಯು ರಘುಪತಿಯು;
ಕುಗ್ಗುವರು ಕೊರಗುವರು ಮನಬಂದ ಪರಿಯಲ್ಲಿ
ಕೂಗುವರು!

ನಾಗರಿಕ— ಮನುಜರಾಗಿಹಿರೆ ನಮ್ಮ ಮನ ತಿಳಿ
ಯುವುದು, ಮನುಜರಲ್ಲದ ನೀವಚಲರಾಗಿಹಿರಿ.
ನಮ್ಮನೇಡಿಪುದುಂಟೆ?

ಋಷಿ— ನಾಳಿನಾ ದಿನದಲ್ಲಿ
ದುಃಖವದು ಶಮಿಸುವುದು, ರಾಜ್ಯವನು ಧರ್ಮವನು
ಸಲಹಿದಾ ಗುರುದೇವ ಕಾಣಿಪನು, ತಿಳಿವನ್ನು
ನೀಡುವನು.

ನಾಗರಿಕ— ದುಃಖವದು ಶಮಿಸುವುದೆ? ಈಯೊಡಲ
ನಾಶದಲಿ ಶಮಿಸುವುದು! ಏನ ಬಲ್ಲರೀ ಜೋ
ಗಿಗಳೆಮ್ಮ ಸಂಕಟವ? ಶುಷ್ಕಪತ್ರವ ಮೆದ್ದ
ವರು ಶುಷ್ಕರಾಗಿಹರು, ಶಿಲೆಯಲ್ಲಿ ಕುಳಿತವರು
ಪಾಷಾಣಹೃದಯವಂ ಪಡೆದಿಹರು, ಲೋಕಮಂ
ಮರೆತಿಹರು ಬೊಮ್ಮನಂ ಕುರಿತಿಲ್ಲಿ ಚಿಂತಿಪರು
ಸಾರವಿಲ್ಲದ ಜನರು.

[ನಾಗರಿಕನು ಹೊರಟು ಹೋಗುವನು.]

ದೃಶ್ಯ ೬

[ತುಂಗಭದ್ರಾತೀರದಲ್ಲಿ ನಾಗರಿಕನು ಪ್ರವೇಶಿಸುವನು.]

ನಾಗರಿಕ— ಆರವರು? ಕಾಷಾಯ ವಸ್ತ್ರಮಂ ಪೊದೆದವರು?
ಅಲ್ಲಲ್ಲಿ ಸುಳಿದಾಡಿ ನಿಂತು ನೋಡುತೆ ಮತ್ತೆ
ನಡೆದವರು? ಮಕುಟವರ್ಧನರಾರೊ ಬಂದವರು?
ಅಡಿಗೆರಗಿ ತೆರಳಿದರು. ಇತ್ತಲೇ ಪೋಗಿಹರು.—
ನೋಡುವೆನು; ಕಂಡಿಲ್ಲಿ ಮಾಯವಾಗಿಹರವರು.
ಆರಾರು ಸಂಚರಿಸಿ ಪಾವನವ ಮಾಡುವರೊ!
ಯೋಗಿಗಳ ಗುಹೆಯುಂಟು ಋಷ್ಯಾಶ್ರಮಗಳುಂಟು.

[ಹುಡುಕುತ್ತ, ಹೋಗುವನು.]

[ವಿದ್ಯಾರಣ್ಯರ ಪ್ರವೇಶ.]

ವಿದ್ಯಾರಣ್ಯ— ಇಂದೇಕೆ ಮನದೊಳಗೆ ಕಳವಳವು? ಅಚ್ಯುತಾ
ದಿಗಳೆಲ್ಲ ಪೊಡಮಟ್ಟು ತೆರಳಿದರು. ಸಂಕಲ್ಪ
ವೇನುಂಟೊ?

[ಪೂಜಾರಿಯ ಪ್ರವೇಶ.]

ದುಗುಡದಿಂ ಬಂದಿಹನು.

ಪೂಜಾರಿ— ಗುರುದೇವ!

[ಪೂಜಾರಿಯು ನಮಸ್ಕರಿಸುವನು.]

ವಿದ್ಯಾರಣ್ಯ— ಆರ್ಯ, ದುಗುಡವಿದೇನು? ಏಳೇಳು.

[ಕೈಹಿಡಿದು ಎಬ್ಬಿಸುವರು.]

ಪೂಜಾರಿ— ಗುರುದೇವ!
ಗುರುದೇವ!



ತುಂಗಭದ್ರಾ ನದಿ

ವಿದ್ಯಾರಣ್ಯ— ದೇವನೊಳ್ಳಿದನೆ ಮಾಡುವನಾರ್ಯ.

ಪೂಜಾರಿ— ದುಗುಡಮೇಂ ತುಂಬಿರದೆ ಕೇಳುವಿರಿ ಗುರುದೇವ?
ದುಷ್ಕಾಲ ಬಂದಿಹುದು ಧರ್ಮವದು ಪೋಗಿಹುದು.
ನೋಡದೆಯೆ ಕಣ್ಮುಚ್ಚಲೆನ್ನಾಯು ಮುಗಿದಿಲ್ಲ.
ಪಾಪಿ ಜೀವದಲಿದ್ದು ಮಾಡುವುದು ತಾನೇನು?

ವಿದ್ಯಾರಣ್ಯ— ನೊಂದಿರುವೆ, ನೊಂದಿರುವೆ.

ಪೂಜಾರಿ— ನೋಯದೇಂ? ಪೇಳಿರೈ
ಗುರುದೇವ. ಧರೆಯಲ್ಲಿ ನಾಸ್ತಿಕರು ಹೆಚ್ಚಿದರು
ದೇವನಂ ಲಕ್ಷಿಸರು ಭಯ ಭಕ್ತಿಯಿನಿತಿಲ್ಲ,
ದೇವಂಗೆ ಮೊರೆಯಿಡಲು ಮೌನಮುದ್ರೆಯ ತಾಳಿ
ತಾನಿಹನು. ಬಿನ್ನಪವ ಲಾಲಿಸನು ಪಾಲಿಸನು.
ಧರ್ಮವೆಂಬುದು ಅತಲಜಲದಲ್ಲಿ ಮುಳುಗಿಹುದು.
ಏಗೈವೆನೇಗೈವೆ ಗುರುದೇವ? ಅನುದಿನವು
ಭಜಿಸಿದೆವು, ಯುಗಯುಗಾಂತರದಿಂದ ಸೇವೆಯಂ
ಮಾಡಿದೆವು. ಅಪಚಾರವೆಣಿಸಿಲ್ಲ. ದೇವಂಗೆ
ದಯೆಯಿಲ್ಲ.

ವಿದ್ಯಾರಣ್ಯ— ಆರ್ಯ, ನೊಂದು ನುಡಿಯುವೆ, ಧರ್ಮಮೇಂ
ದೇವನನು ದೂರುವುದು?

ಪೂಜಾರಿ— ನೋಯದಿರುವೆನದೆಂತು?
ನಾಸ್ತಿಕನು ಬಂದಿಂದು ಲೋಕೈಕನಾಥನನು
ಪಂಪಾಧಿನಾಥನನು ಹಳಚಿದನು. ದೂಷಣೆಗೆ
ಕೊನೆಯಿಲ್ಲ. ಕಲ್ಲುಗೊಂಬೆಗಳೆಂದು ಮಹಿಮೆಯದು
ಸಟೆಯೆಂದು ಪೊಳ್ಳುಕಥೆಯೆಂದು ಉದರಪೋಷಣ
ವೆಂದೆಲ್ಲವನು ಜರಿದು, ತೀರ್ಥವನು ಕೈಕೊಳದೆ
ಮರಳಿದನು. ನೋಯದಿರುವೆನದೆಂತು ಗುರುದೇವ?

ವಿದ್ಯಾರಣ್ಯ— ದುರ್ಜನರು ಕೆಲರುಂಟು ಸಜ್ಜನರು ಕೆಲರುಂಟು.
ಕರ್ಮಬದ್ಧರು ನರರು. ಅವರವರ ಪುಣ್ಯಪಾ
ಪಗಳುಂಟು, ನೋಡುವವ ಬೇರುಂಟು. ನೋಯದಿರು
ಆರ್ಯ, ನೀ ನೋಯದಿರು.

ಪೂಜಾರಿ— ತಾವೆಲ್ಲ ಕೆಟ್ಟಿಹರು
ಲೋಕಮಂ ಕೆಡಿಸುವರು, ಕಟ್ಟುನಿಟ್ಟುಗಳಿಲ್ಲ.
ಧರ್ಮವೇನುಳಿಯುವುದೆ? ಲೋಕವೇನುಳಿಯುವುದೆ?

ವಿದ್ಯಾರಣ್ಯ— ಜನಪದದ ಮನವೆಲ್ಲ ಹರಿಹಂಚು. ದುಃಖದಿಂ
ತುಂಬಿಹರು.

ಪೂಜಾರಿ— ಗುರುದೇವ ಧರ್ಮವಂ ಕಾಪಿಡದೆ
ಬರಿದೆ ನೋಡುವುದುಂಟೆ?

ವಿದ್ಯಾರಣ್ಯ— ಧರ್ಮವಂ ಕಾಪಿಡುವೆ.
ಧರ್ಮತರು ಶುಷ್ಕವೆಂದೆಣಿಸದಿರು. ಕಾಲಗತಿ
ಯನುಸರಿಸಿ ಧರ್ಮವದು ಬೆಳೆಯುವುದು. ಹಿಂದೆ ತಿಳು
ಹಿದ ಧರ್ಮವಂದಿನಲಿ ನೆರವಾಯ್ತು. ಇಂದಿಗದ
ರಲಿ ಕೊರತೆ. ಯುಗಧರ್ಮವುಂ ತಿಳಿಯದೊಡೆ ಕೇಡು.

[ನಾಗರಿಕನ ಪ್ರವೇಶ.]

ನಾಗರಿಕ— ಧರ್ಮಕರ್ಮಗಳೆಲ್ಲ ಕೆಲದಿನಂ ದೂರಿರಲಿ.
ಪುರುಷಂಗೆ ಮೀರಿದುದು ಮೂಲೋಕದೊಳಗಿಲ್ಲ,
ಶಕ್ತಿಯುಂ ತೋರುವೊಡೆ ತಾ ದೇವನಹನಿಂದು
ಅಜ್ಞಾನ ಮುಚ್ಚಿದೊಡೆ ತಾ ಮನುಜನಹನಿಂದು.
ಹರಿಯುಜರ ಅಂಶಗಳು ಕಾಲಭೈರವನಂಶ
ನಮ್ಮೊಳಗೆ ಸೇರಿಹವು ದೇವನಂ ಮಾಡಿಹವು.
ವಿಧಿಬರೆದ ಬರೆಹವಂ ಪ್ರಾರಬ್ಧವೆಂಬುದಂ
ತೋಳತೀಟದಿ ತೊಡೆದು ಬೇರೊಂದು ಬರೆಹವಂ
ತೋರುವೆವು. ವೀರರಾ ಪಂಥವದು ನೇಮವದು.

ಕಣ್ಣಿನಲಿ ನೀರೇಕೆ? ಮನದಲ್ಲಿ ಕೊರಗೇಕೆ?
ಹಂಪೆಯಲಿ ರಾಜ್ಯವಂ ಕಟ್ಟಿದರು ನಮ್ಮವರು
ಪರಧರ್ಮದಾಹತವ ಬಿಗಿ ತಡೆದರೆಮ್ಮವರು.
ಅಂಜಿಕೆಯು ಬಾಳೇಕೆ? ಅತ್ತು ಕಾಡುವುದೇಕೆ?
ಮೊರೆಯಿಟ್ಟು ಶತವರ್ಷ ಹೇಡಿ ಜೀವನವೇಕೆ?
ಸಾಹಸದ ಬಾಳಿರಲಿ, ಗಳಿಗೆಯೊಂದರ ಬಾಳು
ಸಾವಿನಲಿ ಸುಖವುಂಟು ಧೈರ್ಯದಲಿ ಜಸವುಂಟು.
ಮಾನವೆಂಬುದೆ ಜೀವ ಮಾನವಂ ರಕ್ಷಿಪುದು
ಅಭಿಮಾನಧನರಾಗಿ ಚಿರಕಾಲ ಬಾಳುವುದು.

[ನಾಗರಿಕನು ಮುಂದೆ ನೋಡುವನು.]

ಪೂಜಾರಿ— ಇಲ್ಲಿಗೇಕೈತಂದ ನಾಸ್ತಿಕನು ದೂಷಿಗನು?
ದೇವನಂ ದೂಷಿಸಿದ ಪಾಪಿಯಿವ ಗುರುದೇವ.

ನಾಗರಿಕ— ಗುರುವರರು! ಗುರುವರರು! ಹಾ ದೇವ!

[ವಿದ್ಯಾರಣ್ಯರ ಕಾಲಮೇಲೆ ಬಂದು ಬೀಳುವನು.]

ವಿದ್ಯಾರಣ್ಯ— ದುಃಖದಿಂ
ತುಂಬಿಹನು. ಅಕಟಕಟ! ಮೈಮರೆದು ಬಿದ್ದಿಹನು.

[ಪೂಜಾರಿಗೆ]

ಮೈಮರೆದನೀತನಂ ಸಂತೈಸು.

ಪೂಜಾರಿ— ನಾಸ್ತಿಕನ
ನೋಡುವುದೆ? ಮುಟ್ಟುವುದೆ? ಗುರುದೇವ ನಿನ್ನಾಜ್ಞೆ.

[ಅರೆಮನಸ್ಸಿನಿಂದ ಹಿಡಿಯುವನು.]

ವಿದ್ಯಾರಣ್ಯ— ಆಸ್ತಿಕನ ನಾಸ್ತಿಕನ ಭೇದವೊಂದೆಡೆಯಿರಲಿ
ಶರಣಜನ ಸಂರಕ್ಷಣವೆ ಧರ್ಮವಾಗಿಹುದು.
ಮೈಮರೆದನೀತನಂ ದೂಷಿಪುದು ಧರ್ಮವೇಂ?

ಪೂಜಾರಿ— ಕ್ಷಮಿಸುವುದು ಗುರುದೇವ; ತಪ್ಪೆನ್ನ ಮನ್ನಿಪುದು.

[ಉಪಚರಿಸುವನು. ವಿದ್ಯಾರಣ್ಯರು ಕೈಹಿಡಿದು ನಾಗರಿಕನನ್ನು ಎಬ್ಬಿಸುವರು.]

ವಿದ್ಯಾರಣ್ಯ— ದೇವನಿಹ ಕರುಣಾಳು; ಒಳ್ಳಿದನೆ ಮಾಡುವನು.

ನಾಗರಿಕ— ಪಾದಕಮಲವ ಕಂಡು ಧನ್ಯನಾದೆನು ದೇವ
ಪಾದಕಮಲದ ಧೂಳಿ ಎನ್ನ ಶಿರದೊಳಗಿರಲಿ.
ಜಡದೇಹವನು ಬಿಟ್ಟು ತೆರಳಿದಿರಿ ನೀವೆಂದು
ಲೋಕದಲಿ ಸಾರಿದರು ಜಡಜನರು. ಅವತರಿಸಿ
ನೀವು ಬಂದಿಹುದುಂಟೆ? ಇಲ್ಲಿ ನಿಲ್ಲುವುದುಂಟೆ?
ಧೈರ್ಯವನು ಶೌರ್ಯವನು ಮತ್ತೆ ತುಂಬುವುದುಂಟೆ?
ಕರುಣಾಳುಗಳು ನೀವಿಲ್ಲಿ ಬಂದಿಹಿರಿ. ಸಲಹಿರೈ
ಗುರುದೇವ.

ವಿದ್ಯಾರಣ್ಯ— ಲೋಕದಲಿ ನಾವುಂಟು. ಲೋಗರೆದು
ರಿಗೆ ನಿಂದು ಕಾಣುವವರಲ್ಲೆಮಗೆ ಸಾವಿಲ್ಲ.

ನಾಗರಿಕ— ಅಂಧಕಾರದಲಿದ್ದು ರೋದಿಸಿದ ಶಿಶುಗಳಂ
ಜ್ಯೋತಿಯಿಂ ಸೈಪಿಟ್ಟು ಪೊರೆದಿರೈ ಗುರುದೇವ.
ಹೃತ್ಸರಸಿ ಬತ್ತಿರಲು ನವಜಲದ ಧೈರ್ಯಮಂ
ಪೊರಸೂಸುವಂದದಿಂ ತುಂಬಿದಿರಿ ಗುರುದೇವ.
ಹೇಮಂತನುಪಹತಿಗೆ ಕಳೆಯಿಳಿದ್ದ ಮರದಲ್ಲಿ
ಮಧುವಿಂದೆ ತಳಿರು ಪೂ ತೋರಿದಿರಿ ಗುರುದೇವ.
ಎಳಪೈರು ಬಾಡಿರಲು ಸೊರಗಿರಲು ಜಲಧಾರೆ
ಸೂಸಿದಿರಿ ಕಳಕಳನೆ ನಗಿಸಿದಿರಿ ಗುರುದೇವ.

ವಿದ್ಯಾರಣ್ಯ— ಕಾರ್ಯವೊದಗಿರುವಲ್ಲಿ ಕಾರ್ಯವನು ಸಾಧಿಪುದು
ಬರಿದೆ ಶೋಕಿಪುದಲ್ಲ. ಗತವೈಭವಕೆ ಕೊರಗಿ
ಹರಣಮಂ ಬಿಡಲುಂಟೆ? ಆಗುವುದು, ಪೋಗುವುದು.

ಮುಂದಿನಾ ವೈಭವಕೆ ತಳಹದಿಯು ಹಿಂದಿನದ
ಸಂಪದವು.

ಪೂಜಾರಿ— ಗುರುವಿನಲಿ ಭಕ್ತಿಯಿಹುದೀತನಿಗೆ.
ನಾಸ್ತಿಕನೊ ಆಸ್ತಿಕನೊ ತಿಳಿಯದಿದು. ಪೊಸರೀತಿ
ಯಾಗಿಹುದು.

ನಾಗರಿಕ— ತಾವು ಸೃಜಿಸಿದ ಶಿಶುವು ತಾವು ಸಲ
ಹಿದ ಶಿಶುವು ವಿಜಯನಗರದ ರಾಜ್ಯ ನಿಲಲಿಲ್ಲ.
ಶೋಕವೆಂತಡಗುವುದು ?

ವಿದ್ಯಾರಣ್ಯ— ಆರು ಕಟ್ಟಿದೊಡೇನು ?
ಈಶ ಸಂಕಲ್ಪವದು. ರಾಮರಾಜ್ಯವು ಪೋಗ
ದೇನಿಹುದೆ? ಧರ್ಮರಾಜ್ಯವು ಪೋಗದೇನಿಹುದೆ?
ಇನ್ನುಳಿದ ರಾಜ್ಯಗಳ ಮಾತೇಕೆ?

ನಾಗರಿಕ— ಮಮತೆಯಂ
ಬಿಟ್ಟಿಹಿರಿ ಸುಲಭದಲಿ ಹೇಳುವಿರಿ. ಈಶನೇಂ?
ಈಶ ಸಂಕಲ್ಪವೇಂ? ಅರ್ಥವಾಗವು ನಮಗೆ.

ವಿದ್ಯಾರಣ್ಯ— ಹುಟ್ಟು ಸಾವುಗಳೆಲ್ಲ ಜೀವಿಗಳಿಗಿರುವಂತೆ
ಚಕ್ರಾಧಿಪತ್ಯಗಳಿಗುಂಟು. ಚಿಂತಿಸಲೇಕೆ?
ಕಾಲಚಕ್ರದಲಿರುವ ಚಕ್ರಾಧಿಪತ್ಯಗಳ
ಗಣನೆಯಂ ಮಾಡಬಲ್ಲವರುಂಟೆ? ದೈವದಾ
ಜ್ಞೆಯಲಿ ತೋರುವುವು, ಸಂಕಲ್ಪ ಕಾರ್ಯವ ಮಾಡಿ
ಮುಳುಗುವುವು; ವಿಶ್ವವದು ಮುಂದು ಮುಂದಕೆ ನಿಯತ
ಮಾರ್ಗದಲಿ ಬೆಳೆಯುವುದು. ಅದರೊಳಗೆ ಮಾನವಗೆ
ಗೋಚರಿಪುದತ್ಯಲ್ಪವಲ್ಲದೇಂ ಪಿರಿದುಂಟೆ?
ಶೋಕದಿಂ ಫಲವಿಲ್ಲ. ಜನದಂತೆ ಜನಪದವು
ನೀತಿಯಂ ಬಿಟ್ಟಂದು ದುರ್ಗತಿಗೆ ಪಕ್ಕಾಗಿ
ಬೀಳುವುದು.

ನಾಗರಿಕ— ಮತ್ತೆಮಗೆ ಗತಿಯೇನು ಗುರುದೇವ?

ವಿದ್ಯಾರಣ್ಯ— ಗತಿಯುಂಟು, ದೈವದೊಲ್ಮೆಯುದುಂಟು. ವಿಶ್ವಮೈತ್ರಿಯ ಬೆಳೆಸಿ ಕಟ್ಟುವೆವು ರಾಜ್ಯಗಳ.

ನಾಗರಿಕ— ಗುರುದೇವ
ಅಂತಾದೊಡೇನೆಮಗೆ ಧೈರ್ಯಮಂ ನೀಡುವಿರೆ?

ವಿದ್ಯಾರಣ್ಯ— ಅಹುದಹುದು, ಮುಂದಿನದ ವೈಭವವು ಹೆಚ್ಚಿನದು. ಸಂಕಲ್ಪದೊಳಗುಂಟು.


ನಾಗರಿಕ— ಆದುದಂ ನೋಡಿದಿರಿ
ಆಗುವುದ ನೋಡುವಿರಿ, ಅಲ್ಪಾಯುಗಳು ನಾವು.
ಹಿಂದಿನದ ವೈಭವದ ಸಿರಿನೋಟವಂ ನೋಡ
ಬೇಕೆಂಬ ಮನವಿಹುದು, ಕರುಣಿಸಿರಿ ಗುರುದೇವ.
ಕೇಳುಂಟು. ಬಣ್ಣನೆಯ ವೈಖರಿಯು ಒಳಗಣ್ಣ
ಕಟ್ಟಿಹುದು, ಹೊರಗಣ್ಣಿನಲಿ ನೋಡುವಾ ಪುಣ್ಯ
ಎಮಗಿಲ್ಲ; ಬೇಡುವೆನು ಕೈಮುಗಿದು.

ವಿದ್ಯಾರಣ್ಯ— ಗತವೈಭ
ವವನೀಕ್ಷಿಸಲು ತವಕಪಡುತಿರುವೆ, ದುಃಖವಿ
ವ್ಮಡಿಯಹುದು.

ನಾಗರಿಕ— ಬೇಡುವೆನು ಗುರುದೇವ.

ವಿದ್ಯಾರಣ್ಯ— ಶೋಕದಿಂ
ಕಂಗೆಟ್ಟು ಮತಿಗೆಡುವೆ. ಬೇಕೆಂಬ ಮನವುಂಟೆ?

ನಾಗರಿಕ— ಗುರುದೇವ, ಸಾಮ್ರಾಜ್ಯ ವೈಭವದ ದೃಶ್ಯಮಂ
ಬೇಡವೆನ್ನುವನುಂಟೆ? ಕನ್ನಡಿಗ ತಾನುಂಟೆ?
ನೋಡಬೇಕೆಂದಿಹುದು ಮನದಲ್ಲಿ ಕರುಣಿಸಿರಿ.
ಈಗಿಲ್ಲಿ ಪಾಳು ನೆಲ ಪಾಳು ದೇಗುಲವುಂಟು
ಜೀರ್ಣ ನಗರವಿದುಂಟು ಜೀವರಹಿತವಿದುಂಟು.
ಎನಿತು ಜನವಿದ್ದುದೋ ಎನಿತು ಗೃಹವಿದ್ದುದೋ



ವಿಜಯದಶಮಿಯ ದಿಬ್ಬ

ಸೌಧಗಳ ಸಾಲುಗಳು ವೀಧಿಗಳ ರಾಜಿಗಳು
ಅಲ್ಲಲ್ಲಿ ಗುಡಿಕಟ್ಟಿ ಜೀವಕಳೆಯಂ ಕಟ್ಟಿ
ಕಿಕ್ಕಿರಿದ ಸಂದಣಿಯ ಘೋಷದಿಂ ತೋಷದಿಂ
ತುಂಬಿರ್ದ ನಗರವಂ ರಾಜ್ಯಮುಖಕಮಲವುಂ
ತೋರುವುದು ಗುರುದೇವ. ದೇವಮಂದಿರದಲ್ಲಿ
ಭಕ್ತಿಮಂದಿರದಲ್ಲಿ ಮಂಗಳದ ಮೂರ್ತಿಗಳು
ಸೇವೆಯಂ ಪೂಜೆಯಂ ಕೈಕೊಳುತ ಪರಸುತ್ತ
ರಾಜ್ಯವನು ಪೊರೆದ ಪರಿಯಂ ತೋರಿ ಗುರುದೇವ.
ಗಜಘಟೆಯು ತೇರುಗಳ ಘೋಟಕವ್ರಾತಗಳ
ಬೃಂಹಿತವು ಚೀತ್ಕೃತವು ಹೇಷೆಗಳು ತುಂಬಿರಲು
ಸಿಂಹನಾದದ ಭಟರು ಕೆಚ್ಚೆದೆಯ ಕಾಲಾಳು
ಯುದ್ಧಮುಖದಲಿ ನಿಂದು ಯಜ್ಞವಂ ಮಾಡಿದುದ
ತೋರುವುದು ಗುರುದೇವ. ದಿಗ್ದೇಶದಿಂ ಬಂದು
ಕಪ್ಪ ಕಾಣಿಕೆ ತಂದು ತಂಡ ತಂಡದಿ ನಿಂದು
ರತ್ನ ಸಿಂಹಾಸನಾಧೀಶ್ವರನ ಪದದಲ್ಲಿ
ರಾಯಭಾರಿಗಳೆಂತು ಸಾಮಂತ ನೃಪರೆಂತು
ಕೈಮುಗಿದರೆಂಬುದಂ ತೋರುವುದು ಗುರುದೇವ.

ವಿದ್ಯಾರಣ್ಯ— ದೈವಸಂಕಲ್ಪವದು! ದೈವಸಂಕಲ್ಪವದು!

ನಾಗರಿಕ— ಶೋಕಕಂಪಿತ ಸ್ವರವೇಕೆ? ರಾಗಾದಿ ಬಂ
ಧನದಿ ಮುಕ್ತರಿಗೆ ಮನವಿಂದು ತಲ್ಲಣವೇಕೆ?
ಪೂರ್ವವೈಭವದ ನೆನಪಾಗೆ ಕಲ್ಲು ತಾ ಕರ
ಗುವುದು. ಮನಮರುಗದಿಹುದೆಂತು? ಕೊರಗದಿಹುದೆಂತು?
ಮಮತೆಯೆನ್ನುವ ಪಾಶ ಯತಿವರರ ಬಿಟ್ಟಿಲ್ಲ
ಯೋಗಿಗಳ ಬಿಟ್ಟಿಲ್ಲ, ಎಮ್ಮೊಂದಿಗರ ಪಾಡು
ಪೇಳಲೇನಹುದಿನ್ನು?

ವಿದ್ಯಾರಣ್ಯ— ಬಿಡುತಿಹೆವು, ಬಿಡುತಿಹೆವು

ಬಿಟ್ಟಿಹೆವು. ದೈವಸಂಕಲ್ಪಕೇನಿದಿರುಂಟೆ?
ನಿಂತು ಸಾಧಿಪುದುಂಟೆ?

ನಾಗರಿಕ— ಕರುಣಿಸಿರಿ ಗುರುದೇವ!

ವಿದ್ಯಾರಣ್ಯ— ದೃಶ್ಯದಿಂದೇನುಂಟು? ಮರೆಯುವುದು ತಾ ಲೇಸು.

ನಾಗರಿಕ— ಪೂಜ್ಯರೇ, ಕರುಣಿಸಿರಿ. ವೈಭವ ಸ್ಮರಣೆಯಿಂ
ರಾಜಸವು ಬೆಳೆಯುವುದು, ರೋಷಾಗ್ನಿ ಪೊತ್ತುವುದು
ತಾಮಸವು ಬತ್ತುವುದು. ಬೇಡುವೆನು ಗುರುದೇವ.

[ಮಾನವಮಿ ದಿಬ್ಬಗಳಮೇಲೆ ದರ್ಬಾರುಗಳು—ರಾಯಭಾರಿಗಳು ಬಂದುಹೋಗುವುದು—ಅಂತಃಪುರ, ಅರಮನೆಗಳು, ಜನಸಂದಣಿ—ಉತ್ಸವಾದಿಗಳ ದೃಶ್ಯ ಕಣ್ಣಿಗೆ ಬೀಳುವುದು. ಅನಂತರ ತಿರುಮಲಾಂಬೆಯು ದೇವಸ್ಥಾನದಲ್ಲಿರುವ ದೃಶ್ಯ ಕಾಣುವುದು.]

ವಿದ್ಯಾರಣ್ಯ— ರಣರಂಗದಲಿ ರಾಮರಾಜನಿರೆ ದೇವಿಯುಂ
ಪೂಜಿಸಲು ಬಂದಿಹಳು. ಜಯವಧುವ ಸವತಿಯುಂ
ಮಾಡೆಂದು ಬೇಡುವಳು ದೈನ್ಯದಲಿ. ರಾತ್ರಿಯಲಿ
ದುಸ್ಸ್ವಪ್ನವಾಗಿಹುದು, ಬರಸಿಡಿಲ್ ಬಂದೆರಗಿ
ಫಲಿತಕುಜಮಂ ತಾಗಿ ಧಳ್ಳಿಸಿತು; ಚೀರಿದುದು
ಕೀರನಿಕುರಂಬ; ಸುಟ್ಟಿಹುದು ಸೀಕರಿಯಾಗಿ
ಬಿದ್ದಿಹುದು. ದುಷ್ಫಲವ ಕಾಣಿಸದೆ ಮಂಗಳವ
ಮಾಡೆಂದು ಕಂಪಿಸುತ ಬೇಡುವಳು.

ನಾಗರಿಕ— ಹಾ! ದೇವಿ.

[ಯುದ್ಧಕ್ಕೆ ಹೊರಟಿರುವ ಸೈನ್ಯದ ದೃಶ್ಯ—ಯುದ್ಧರಂಗ.]

ಪರಸುವುದು ಗುರುದೇವ! ಕಾದಿಹರು ಯುದ್ಧದಲಿ!

[ಮೊಣಕಾಲೂರಿ ಕೈಮುಗಿದು ಹೊರಡುವನು.]

ಬಂದೆಸಿದೆ—ಬಂದೆಸಿದೆ, ಆಯುಧವ ನೀಡುವುದು.
ಇಂದಿನಾ ರಣದಲ್ಲಿ ಯಮಲೋಕ ಕಿಕ್ಕಿರಿದು

ಬೊಬ್ಬಿಡಲಿ. ಅಹಿತವಾಹಿನಿಯನ್ನು ಕಡಿಕಡಿದು
ರಕ್ತದಲ್ಲೋಕುಳಿಯನಾಡುವುದು, ಭೂತಗಣ
ಕೌತಣವ ಮಾಡುವುದು. ಧರ್ಮದಲಿ ಮನವಿಟ್ಟು
ಕಾದಿರೈ. ಮಾತೃಭೂಮಿಯ ಸೇವೆ ಮಿಗಿಲಾದ
ಧರ್ಮವೈ. ಅರಿರುಂಡ ಚೆಂಡಾಡಿಯಾಕಾಶ
ಮಂಡಲವ ರುಂಡಮಯ ಮಾಡುವುದು, ಸಾಗರವ
ರಕ್ತಮಯ ಮಾಡುವುದು, ವೈಮರೆದು ಕಾದುವುದು.
ಮಹಿಳೆಯರ ಮಾನವಂ ಪಾಲಿಸಲು ಕಾದುವುದು
ಮಕ್ಕಳಿಗೆ ಪರತಂತ್ರ ತಪ್ಪಿಸಲು ಕಾದುವುದು
ದೇವಮಂದಿರವ ಪರಿರಕ್ಷಿಸಲು ಕಾದುವುದು.
ಗೆದ್ದರುಂಟೀ ನಾಡು, ಸತ್ತರುಂಟಾ ಸ್ವರ್ಗ.
ಕೊಲ್ಲುತ್ತ ಕಾದುವುದು ಹಿಂಜರಿಯಬೇಡಿರೈ.
ಕೊಲ್ಲದೇ ಓಡಿದರೆ ಜಯವಧುವು ಮೆಚ್ಚುವಳೆ?
ಪೇಡಿಯೆಂದೇಡಿಸಳೆ? ಭೂಮಾತೆ ಶೋಕಿಸಳೆ!
ಮಡದಿಯರ ದಾಸ್ಯಮಂ ನಿಮ್ಮೊಡಲ ದಾಸ್ಯಮಂ
ಬೇಡುವೊಡೆ ಓಡುವುದು, ಅಲ್ಲದೊಡೆ ಕಾದುವುದು.
ಆತ್ಮಮಂ ಮಾರುವನು ಮಾತೆಯಂ ಮಾರುವನು
ಪೇಡಿಯಾಗೋಡುವನು ನರಕದಲಿ ಬೀಳುವನು.
ವೀರರಿಹ ಸೈನ್ಯದಲಿ ಹೇಡಿಯೆಂಬವನುಂಟೆ?
ಜೀವದಾಸೆಯದುಂಟೆ? ಕಡಿಯುವುದು ಕಾದುವುದು
ನುಗ್ಗುವುದು, ಶತ್ರುಗಳ ಸೈನ್ಯವಂ ತರಿತರಿದು
ಜಯವಧುವನೆಳೆತಂದು ರಾಮರಾಜರ ಪದಕೆ
ಕೆಡಹುವುದು. ನಡೆಯಿರೈ "ಜಯ ಕಾಳಿ" ಎನ್ನಿರೈ.

[ನಾಗರಿಕನು ಹೊರಟು ಹೋಗುವನು; ಸೈನ್ಯವು ಅದೃಶ್ಯವಾಗುವುದು.]

ಪೂಜಾರಿ— ಅಕಟಕಟ! ಮತಿವಿಕಳನಾಗಿಹನು, ಪೋಗಿಹನು.
ದುಃಖವಾಗುವುದೆನಗೆ. ಈ ಹುಚ್ಚು ಹೋಗುವುದೆ
ಗುರುದೇವ?

ವಿದ್ಯಾರಣ್ಯ— ಹುಚ್ಚಿನಲಿ ಪಲವುಬಗೆ, ಪೋಗುವುದು
ಕೆಲವುಂಟು ನಿಲ್ಲುವುದು ಕೆಲವುಂಟು.

[ನಾಗರಿಕನು ಪ್ರವೇಶಿಸುವನು.]

ನಾಗರಿಕ— ಅವರೆಲ್ಲಿ?
ಆ ವೀರರೆಲ್ಲಿಹರು? ಸಂಗ್ರಾಮ ಕೋಲಾಹ
ಲದಿ ನುಗ್ಗುವಾ ವೀರರೆಲ್ಲಿಹರು?

ವಿದ್ಯಾರಣ್ಯ— ಎಲ್ಲಿಹರು?
ಸಗ್ಗಕೇರಿದರವರು ಅಂದಿನಾ ದಿನದಲ್ಲೆ.

ನಾಗರಿಕ— ಅವರೊಡನೆ ಪೋಗುವೆನು ಮರಣವನು ಕೋರುವೆನು
ಇಲ್ಲಿ ನಿಲ್ಲುವುದುಂಟೆ? ಪಂದೆಯಾಗುವುದುಂಟೆ?

ವಿದ್ಯಾರಣ್ಯ— ಆರಿರುವರಲ್ಲೀಗ, ಬರಿಯ ಬಯಲಾಟವನು
ತೋರಿದೆನು. ಪೋಗದಿರು, ದುಃಖಕೀಡಾಗದಿರು.

ನಾಗರಿಕ— ಮಾಯವನು ಬೀರಿದಿರೆ ಗುರುದೇವ? ಶೂನ್ಯದಲಿ
ತೋರಿದಿರೆ ಸಾಮ್ರಾಜ್ಯ ವೈಭವವ? ಕನಸಿನಿಂ
ದೆಚ್ಚತ್ತು ಮರುಗುವಂತಾಯ್ತು, ಮರುಳುತನವೆನ
ಗಾಯ್ತು. ತಿಳಿವಿಲ್ಲದಿಹ ಕುರಿಯಾದೆ ಗುರುದೇವ.

ವಿದ್ಯಾರಣ್ಯ— ಐಹಿಕದ ರಾಜ್ಯಸಂಪದವೆಲ್ಲ ಮಾಯೆಯಿಂ
ಜನಿಸುವುದು ಮಾಯೆಯಲ್ಲಡಗುವುದು, ಈ ಮಾಯೆ
ಪರಮಾತ್ಮನಾಧೀನ.

ನಾಗರಿಕ— ಪೋದುದೆಮ್ಮಯ ನಾಡು!

ವಿದ್ಯಾರಣ್ಯ— ಎತ್ತಲೇಂ ಪೋಗಿಲ್ಲ ನಾಡಿಹುದು, ನೀವಿಹಿರಿ.
ಮುಂದಿನದ ವೈಭವವು ಹೆಚ್ಚಿನದು. ಸಂಕಲ್ಪ
ದೊಳಗುಂಟು. ಭರತವರ್ಷದ ಭವಿಷ್ಯವದು ಕುಂ
ದಿಲ್ಲ. ಭರತಮಾತೆಯ ಗರ್ಭದಲಿ ವೀರ ರ
ತ್ನಗಳಿಹವು. ಉದಿಸುವರು, ಕಟ್ಟುವರು ರಾಜ್ಯಗಳ

ಚಕ್ರಾಧಿಪತ್ಯಗಳ.

[ನಾಗರಿಕನು ನೀರವವಾಗಿರುವನು.]

ದುಮ್ಮಾನವಿನ್ನೇಕೆ?
ಲೋಕದಲ್ಲಿಹ ಸಾರ ಜನವೆಲ್ಲ ಸೇರಿಹುದು.
ಸರ್ವತೋಮುಖದಲ್ಲಿ ಮೈತ್ರಿಯಿಂ ಬೆಳಸುವಾ
ಸಂಕಲ್ಪ—ಪೊಸಪರಿಯ ರಾಜ್ಯವಂ ಕಟ್ಟುವಾ
ಸಂಕಲ್ಪವಿಹುದಲ್ಲಿ. ಕಾಲಗತಿಯನುಸರಿಸಿ
ಜನಪದವು ಬೆಳೆಯುವುದು; ಮುಂದಿಹುದು ವೈಭವವು.

ನಾಗರಿಕ— ಪಾಪಿಗಳು ನಾವು ಕಿಲ್ಬಿಷವು ಹತ್ತಿಹುದು, ಆ
ಪರಮಾತ್ಮನೊಲಿಯುವನೆ?

ವಿದ್ಯಾರಣ್ಯ— ಕಿಲ್ಬಿಷವು ಸುಟ್ಟು ಪುಟ
ವಿಟ್ಟ ಕುಂದಣವಹುದು, ಆರ್ಯಧರ್ಮದ ಹೊಳಪು
ಹೆಚ್ಚುವುದು. ಧರ್ಮಜ್ಞರುದಿಸುವರು, ವೀರ ಧ
ರ್ಮೋಪದೇಶಕರು, ತಿಳಿಸುವರು ಹೆಚ್ಚಿನ ಧರ್ಮ
ಕರ್ಮಗಳ.

ನಾಗರಿಕ— ತಮ್ಮ ದರ್ಶನವೆಂದು ಲೋಕಕ್ಕೆ
ಲಭಿಸುವುದು ಗುರುದೇವ?

ವಿದ್ಯಾರಣ್ಯ— ಇಲ್ಲಿಯೇ ಚರಿಸುವೆವು
ಮೌನದಿಂ ಧ್ಯಾನಿಪೆವು. ಕಾಲವೊದಗಿದೊಡೆ ಬಹಿ
ರಂಗದಲಿ ಕಾಣುವೆವು ಕೈಪಿಡಿದು ಸಲಹುವೆವು.

[ವಿದ್ಯಾರಣ್ಯರು ಅದೃಶ್ಯರಾಗುವರು.]

ನಾಗರಿಕ— ಗುರುಗಳಾಶೀರ್ವಚನದಲಿ ಮತ್ತೆ ತೊಳಗುವೆವು
ಬೆಳಗುವೆವು. ಗುರುಗಳ ನಿರೀಕ್ಷಣೆಯಲನವರತ
ನಾವಿಹೆವು. ಗುರು ಕರುಣವೊಂದಿರಲಿ ದೇವನಂ
ಸಾಧಿಪೆವು—ಕಳೆದುಳಿದ ರಾಜ್ಯಗಳ ಲೆಕ್ಕಿಪೆವೆ?

ಪೂಜಾರಿ— ಅಪರಾಧ ಮಾಡಿದೆನು. ತಿಳಿಯದೆಯೆ ದೂರಿದೆನು.

ನಾಗರಿಕ— ಅಪರಾಧವೆನ್ನದೈ, ದುಃಖದಲಿ ದೂಷಿಸಿದೆ.
ಗುರುಕರುಣವಿಹುದೀಗ, ತಿಳಿವನ್ನು ನೀಡಿಹರು.
ದೈವ ಬಲವಿರಬೇಕು ಪುರುಷಬಲವಿರಬೇಕು
ಅಲ್ಲದೊಡೆ ಕಾರ್ಯಸಾಧನೆಯಹುದೆ?

ಪೂಜಾರಿ— ಅಹುದಹುದು.
ಪಂಪಾಧಿನಾಥನಂ ಭಜಿಸುವುದು ; ಪೊರೆಯುವನು
ಲೋಕವನು ; ಜನಕೆಲ್ಲ ಮಂಗಳವ ನೀಡುವನು.

1125_34.—ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಟಿ. ಸುಬ್ರಹ್ಮಣ್ಯ ಅಯ್ಯರವರಿಂದ ಮುದ್ರಿಸಲ್ಪಟ್ಟಿತು.